ಅಪರಂಜಿ



ತಿಳಿನಗೆಯ ಕಾರಂಜಿ

ಯುಗಾದಿ ವಿಶೇಷಾಂಕ

ಸಂಪುಟ–೩
ಸಂಚಿಕೆ–೨
ಏಪ್ರಿಲ್–1986

ಬಿಡಿಪ್ರತಿ :
ಕೇವಲ ಒಂದೂವರೆ ರೂಪಾಯಿ

ಅಪರಂಜಿ

ಗೌರವ ಸಲಹೆಗಾರರು :

ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕರು ಮತ್ತು ಪ್ರಕಾಶಕರು :
ಶ್ರೀ ಶಿವಕುಮಾರ್

ವಾರ್ಷಿಕ ಚಂದಾ : ರೂ. 15/-
ಅಜೀವ ಚಂದಾ : ರೂ. 150/-
ಬಿಡಿ ಪ್ರತಿ :—ಒಂದೂವರೆ ರೂಪಾಯಿ

ಇಂದು ಯುಗಾದಿ. ಹೊಸ ವರುಷ ಅಕ್ಷಯದಲ್ಲಿ, ನಿಜ ಮೌಲ್ಯಗಳಾದ, ಪ್ರೀತಿ, ನಂಬುಗೆ, ಕರುಣೆ ಇವೆಲ್ಲವೂ ಸಕಲರಿಗೂ ಅಕ್ಷಯವಾಗುವಂತಾಗಲಿ ಎಂದು ಅಪರಂಜಿ ಭಗವಂತನಲ್ಲಿ ಮನಸಾರೆ ಪ್ರಾರ್ಥಿಸುತ್ತಾಳೆ.

ಈ ಬಾರಿ, ಅಪರಂಜಿಯು ಇದುವರೆಗೆ ಚಂದಾದಾರರಾಗಿಲ್ಲದ ಅನೇಕ ಸಹೃದಯ ಮಿತ್ರರ ಮನೆಗೆ ಕಾಲಿಟ್ಟಿದ್ದಾಳೆ. ಆದರದಿಂದ ಬರಮಾಡಿಕೊಳ್ಳಿ. ಇಂದಿನಿಂದ ನೀವೂ ನಮ್ಮ ಬಳಗಕ್ಕೆ ಸೇರಿದರೆ ಅದೊಂದು ಸೌಭಾಗ್ಯ.

ವ್ಯಂಗ್ಯ ಚಿತ್ರಕಾರ ಸೂರಿ (ಚಿಲ್ಲರೆ ತಾಪತ್ರಯ!) ಲೇಖಕರಾಗಿ ಈ ಸಂಚಿಕೆಯಲ್ಲಿ ಮೊದಲಬಾರಿ ಬಂದಿದ್ದಾರೆ. ಅವರಿಗೆ ನಮ್ಮ ಸ್ವಾಗತ.

ಶಿವಕುಮಾರ್
ಸಂಪಾದಕ

ಅಪರಂಜಿ ಕಾರ್ಯಾಲಯ
36, 6ನೇ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು–560 003.

ಈ ಸಂಚಿಕೆಯಲ್ಲಿ ....

☆

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು
ದೂರವಾಣಿ : 362989, 363444



(ತಿಳಿನಗೆಯ ಕಾರಂಜಿ)

ಸಂಪುಟ ೩ ಏಪ್ರಿಲ್ ೮೬ ಸಂಚಿಕೆ ೭

ಅದು ಅಶಬ್ದ, ಅಸ್ಪರ್ಶ, ಅರೂಪ. ಅವ್ಯಯ, ಅರಸ ಅಗಂಧ. ಅನಾದಿ, ಅನಂತ, ಎಂದರಿತವನು ಮೃತ್ಯು ಮುಖದಿಂದ ಬಿಡುಗಡೆ ಹೊಂದುವನು.

—ಕರ

ನಾವು ಸತ್ಯವನ್ನು ಇಂದ್ರಿಯಗಳ ಮತ್ತು ಮನಸ್ಸಿನ ಮೂಲಕ ಹುಡುಕುತ್ತೇವೆ. ಅಸತ್ಯವಾದುದರಿಂದ ಸತ್ಯವನ್ನು ನಿರ್ಧರಿಸಿದರೆ ತಪ್ಪಾಗುವುದು ಸಹಜ, ಸತ್ಯವು ಎಂದೂ ಒಂದೇ, ಇಂದ್ರಿಯ ಮನಸ್ಸುಗಳಿಗೆ ಅತೀತವಾದದ್ದು. ಅದರ ಅನುಭವವೇ ಮರಣವನ್ನು ಗೆಲ್ಲುವುದು ಎಂದು ನಾವು ಕರೆಯುವ ಸ್ಥಿತಿ.

ರಕ್ತಾಕ್ಷಿ–ಕ್ರೋಧನ ಕೊನೆಗೊಳ್ಳುತ್ತಾ ಬಂದಿದೆ. ಇದುವರೆಗೆ ನಾವು ಹೊತ್ತ ಭರವಸೆಗಳೆಲ್ಲಾ ಗಾಳಿಪಾಲಾಗುತ್ತಾ ಬಂದಿದೆ. ಪ್ರಬಲ ರಾಷ್ಟ್ರಗಳ ಆಟ ಬದಲಾಗಲಿಲ್ಲ. ಹಿಂದುಳಿದವು ಮುಂದೆ ಬರಲಿಲ್ಲ. ಕ್ಷೋಭೆ ಹೆಚ್ಚುತ್ತಿದೆ. ನಮ್ಮ ನಾಡಿನಲ್ಲಿ ನಾವೇ ದೂರದವರು, ಬೇರೆಯವರೇ ಇಲ್ಲಿ ಪ್ರತಿಷ್ಠಿತರು ಎನ್ನುವಂತಹ ಗತಿ. ಕರ್ನಾಟಕದ ಮುಖ್ಯಮಂತ್ರಿ ಪದವಿ. ಪಂಜಾಬಿನ ಅನಿಶ್ಚಿತತೆ, ಸಿಂಹಳ ತಮಿಳರ ಹಗರಣ, ಏರುವ ಬೆಲೆಗಳು, ಬರ, ಇವುಗಳ ರಂಗು, ರಂಗೇರುತ್ತಿದೆ, ಭಾರತೀಯತೆ.

ಭಾರೀ ಡಿಸ್ಕೌಂಟ್ ಮಾರಾಟಕ್ಕಿದ್ದರೂ ಯಾರಿಗೂ ಬೇಕಿಲ್ಲ. ಎಲೆಕ್ಟ್ರಾನಿಕ್ ಕಂಪ್ಯೂಟರುಗಳು ನಮ್ಮೆಲ್ಲರ ಸಮಸ್ಯೆಗಳನ್ನು ಹೇಗೆ ಬಗೆ ಹರಿಸಿಯಾವು ? ಛಿದ್ರತೆಗೆ ತೇಪೆ ಹಾಕಿದರೆ ಐಕಮತ್ಯವೇ ?

ಅರವತ್ತನೆಯ ಸಂವತ್ಸರಾರಂಭ, ನಾಡಿನ ಸಂಪತ್ತನ್ನು ಅಕ್ಷಯವಾಗುವಂತೆ ಮಾಡಲಿ. ಆಧುನಿಕ ವಿಜ್ಞಾನದ, ಲೋ–ವೋಲ್ಟೇಜ್ ಕರೆಂಟಿಗೆ ವಿವೇಕದ ಟ್ರಾನ್ಸ್‌ಫಾರ್ಮರ್ ಚೇತನ ವೀಯಲಿ.

ಅಪರಂಜಿ ಕಿಡಿ

—ಆನಂದ್

ರಂಗನ ತಿಟ್ಟನಲ್ಲಿ ಮೊಸಳೆಗಳಿಲ್ಲ.

—ಸುದ್ದಿ

ಇದನ್ನ ಮೊಸಳೆಗಳಿಗೆ ಅಧಿಕೃತವಾಗಿ ತಿಳಿಸಬೇಕು !

* * *

ಕೇಂದ್ರ ಬಜೆಟ್ ಶೀರ್ಷಿಕೆ :

"ಬಿಸಿ ತಟ್ಟಿದ ಹವಾನಿಯಂತ್ರಣ" !

* * * * *

ಅರ್ಜಿ ಕೊಟ್ಟ ತಕ್ಷಣವೇ ರೇಷನ್ ಕಾರ್ಡ್

—ಪತ್ರಿಕೆ

ರಾಮ (ಕೃಷ್ಣ) ರಾಜ್ಯ !

* * * * *

ಇನ್ನು ಮುಂದೆ ವೈದ್ಯರು ತಮ್ಮ ಡಿಗ್ರಿ ಸರ್ಟಿಫಿಕೇಟುಗಳ ಜೊತೆಗೆ ಅಂಕಪಟ್ಟಿಗಳನ್ನೂ ತೋರಿಸಬೇಕು ಎಂಬುದು ಶುದ್ಧ ಕುಹಕ !

* * * * *

ಮಾರ್ಟಿನ ನವ್ರಟಿಲೋವ ಪೆಟ್ಟಿಗೆಯಿಂದ ಪಿಸ್ತೂಲು ವಶ

—ಸುದ್ದಿ

ಅವರ ವಿರುದ್ಧ ಆಡುವವರು ಈಗ ಹುಷಾರಾಗಿರಬೇಕು !

* * * * *

ಕಿರಿಯ ವಯಸ್ಸಿನಲ್ಲಿಯೇ ಹೆಚ್ಚಿದ ಪ್ರೇಮ ಪ್ರಕರಣಗಳು.

—ಚೀನಾ ಸುದ್ದಿ

ಸುದ್ದಿ ಪ್ರಾಚೀನ !

* * * * *

ಈ ವರ್ಷ ರಾಜ್ಯದಲ್ಲಿ 150 ಹೊಸ ಆಸ್ಪತ್ರೆಗಳ ಸ್ಥಾಪನೆ.

—ಶೀರ್ಷಿಕೆ

ಡಾಕ್ಟರುಗಳ ಸ್ಥಾಪನೆ ಯಾವಾಗಲೋ ?

* * * * *

ಅಂಚೆ ಇಲಾಖೆಯಲ್ಲಿ ಕನ್ನಡದ ಬಗ್ಗೆ ಅಲಕ್ಷ್ಯ ; ಕೇಂದ್ರಕ್ಕೆ ಪತ್ರ


—ಸುದ್ದಿ

ಅವರಿಗೆ ಅದು ಅರ್ಥ ಆಗುತ್ತೋ ಇಲ್ಲವೋ ?

* * * * *

ನಮ್ಮ ಓದುಗರಿಗೆಲ್ಲ ವರ್ಷ ಪೂರ್ತಿ ಬೆಲ್ಲದ ಸಿಹಿ ಮಾತ್ರ ಇರಲಿ ಅಂತ ಅಪರಂಜಿ ಹಾರೈಸುತ್ತಾಳೆ !

* * * * *


೨
3
4
5
6

ನನ್ನವಳು ಮತ್ತು ಜಗಳ

ಡುಂಡಿರಾಜ್

ಒಮ್ಮೆ ನಮ್ಮ
ಮಾಮೂಲಿ ಜಗಳ
ಎಷ್ಟು ಹೊತ್ತಾದರೂ
ಮುಗಿಯಲಿಲ್ಲ
ನೆನಪಾಯಿತು
ಉಂಡು ಮಲಗಿದ ಮೇಲೆ
ನಿಲ್ಲ ಬಹುದೆಂದು ಕಾದೆ
ಅಡಿಗೆಯೇ ಆಗಲಿಲ್ಲ!



"ಎಲ್ಲಾರ್ಗೂ ಒಂದೊಂದು ಬಿಟ್ಟೀ.ಕಲರ್ ಟೀವೀ .ಅಂತ ಬಜೆಟ್ ಭಾಷಣದಲ್ಲಿ ಹೇಳೇ ಇಲ್ವಲ್ಲಾರೀ. ಪಕ್ಕದ್ಮನೆ ಪಾರ್ವತಮ್ಮ ತಮಾಷೆಗೆ ಹೇಳಿರ್ಬೋದು ಅಂತೀರಾ!"

8

ವಿಪರ್ಯಾಸ

—ಕೆ. ಪಿ. ಸೀತಾರಾಮ

ಗೆಳೆಯ,
ನೀ
ಈ ಕಲಿಗಾಲದಲಿ
ಹಿಮಾಲಯದ ತಪ್ಪಲಲಿ
ಕಣ್ಮುಚ್ಚಿ
ಒಂಟಿ ಕಾಲಲಿ
ನಿಂತು
ತಪವ ಮಾಡಿದ್ದು,
ಜಟಾಧಾರಿಯಾದ
ಆ
ಶಿವನಿಗಾಗಿ ಅಲ್ಲ!
ತಪೋ ಭಂಗ ಮಾಡ ಬರುವ
ಅಪ್ಸರೆಗಾಗಿ
ಎಂಬುದು
ಯಾರಿಗೂ ಗೊತ್ತಿಲ್ಲದ್ದು!

9

ಬೀರಿನ ಮೋಹ

—ಇ. ಡಿ. ನರಹರಿ

(ಶಿಶುನಾಳ ಶರೀಫ ಸಾಹೇಬರಿಗೆ ಸಲಾಮು ಹಾಕಿ)

ಬೀರಿನ ದಾಹವು ತೀರಿದ ಬಳಿಕ
ಬಾರಿನ ಚೇರಲ್ಲಿ ಕೂರುವುದ್ಯಾಕೊ
ತಾಸು ತಾಸಿಗೆ ಕಾಸನ್ನು ಹೀರುವ
ಸೀಸೆಯ ಆಸೆ ನಿನಗ್ಯಾಕೊ..........

ಗುಂಡು ಹಾಕಿದ ಗಂಡ
ಕಂಡು ಹೆಂಡತಿ ಬಂದು
ಕಂಡದ್ದು ಕೈಗೆತ್ತಿ ಬಡಿದಳಲ್ಲೊ
ಉಂಡಿದ್ದ ತಂದೂರಿ, ಬಿರಿಯಾನಿ, ಚಾವುಗಳು
ಬಂಡೆದ್ದು ಗಂಟಲಲ್ಲಿ ನಿಲ್ಲುವುದ್ಯಾಕೋ........

ಅಯ್ಯೋ! ಗೋವಿಂದಾ! ಬೀರಿನ "ಸೇವ"ಕ*
ಇಂದೂ ಬಾರಲಿ ಬಂದು ಕುಂತಾನ್ಯಾಕೊ ?
ನಮ್ಮೂರ ಮನೆಹಾಳ, ಪುಂಡನ ಭಯದಿಂದ
"ಗುಂಡು" ಗೋವಿಯ ಸಂಗ ಕುಂಡ್ರುವುದ್ಯಾಕೋ ....

(* "ಸೇವ"ಕ – ಸೇವಿಸುವವನು)

ಅಫೇನಿಯಂ ಚುನಾವಣೆ

—ಅಶೋಕ್

ಮುಗಿಲು ಹಳ್ಳಿ ಎಂದಿಗಿಂತಲೂ ಹೆಚ್ಚು ಖುಷಿಯಾಗಿದೆ. ನೂತನ ಯುಗಕ್ಕೆ ಅಣಿಯಾಗಿ ನಿಂತಿದೆ. ಒದ್ದರೆ ಅಳಲಿಕ್ಕೆ ಬಾರದ ಹುಡುಗಿಯರೆಲ್ಲಾ ಚೂಡಿದಾರ್ ಹಾಕಿಕೊಂಡು, ಮರವೇರದ ವಾನರಗಳಂತೆ 'ಹಾಯ್ 'ಹಾಯ್' ಎಂದುಕೊಂಡು ಹಲ್ಲು ಕಿಸಿಯುತ್ತಾ ಬೀದಿಯಲ್ಲೇ ತಮ್ಮ ಇಲ್ಲದ ದೇಹ ಸೌಷ್ಠವ ಮೆರೆಸುತ್ತಿದ್ದಾರೆ. ನಿರಕ್ಷರಿಗಳಾದವರೆಲ್ಲಾ ಕ್ಯಾಪಿಟೇಷನ್ ಬಲದಿಂದ ಇಂಜಿನೀರುಗಳಾಗಲು, ಡಾಕ್ಟರಾಗಲು ಹವಣಿಸುತ್ತಿದ್ದಾರೆ. ಹೊರ ಪ್ರಾಂತ ಗಳಿಂದ ಬಂದವರು ಹಣವನ್ನು ಸುರಿದು ಏನೆಂದರೆ ಆ ಡಿಗ್ರಿಯನ್ನು ಕೊಳ್ಳಲು ಹವಣಿಸುತ್ತಿದ್ದಾರೆ. ಅಪಹರಣಗಳು ಗಲ್ಲಿಗೊಂದು ಗಟಾರಕ್ಕೊಂದು, ದರೋಡೆ ಗಳು ವಾರಕ್ಕೆ ಮೂರು ನಡೆಯುತ್ತಿವೆ. ಇಪ್ಪತ್ತೊಂದಲ್ಲ, ಇಪ್ಪತ್ತುಮೂರನೇ ಶತಮಾನಕ್ಕೆ ಮುಗಿಲು ಹಳ್ಳಿ ಅಣಿಯಾಗಿದೆ.

ಮೊನ್ನೆ ನೂರು ದೊಂಬಿ ರಸ್ತೆಯಲ್ಲಿ ಒಬ್ಬ ಲಾರಿ ಕ್ಲೀನರ್ ಒಬ್ಬ ವ್ಯವ ಹಾರಸ್ಥನಿಗೆ ಹೇಳುತ್ತಿದ್ದ.

"ಅಣ್ಣಾ, ಎಳ್ಡು ಸಾವರಕ್ಕೆ ಅಡಚಣೇನೆ ? ಇಗಾ ಒಂದು ಲಾರಿ. ಅದ್ರಗೆ ಅಕ್ಕಿ ಲೋಡು, ನಾಕ್ಸಾವ್ರ ಕ್ಯಾಸು ತತ್ತಾ. ಬಾಡ್ಗೆ, ಅಕ್ಕಿ ರೊಕ್ಕ, ಎಲ್ಲಾ ನಾನೇ ಕೊಟ್ಗಂತಿನಿ. ಇನ್ನು ಹತ್ತು ದಿನಕ್ಕೆ ಹತ್ಸಾವ್ರ ನಿನ್ನ ಪಾದಕ್ಕೆ ತಂದು ಕೊಡ್ತೀನಿ. ಹಳೇಪ್ಯಾಟೆ ದುರ್ಗವ್ವನಾಣೆ.

ಹತ್ತು ವರ್ಷದ ಕೆಳಗೆ ಹಮಾಲಿ ಮಾಡುತ್ತಿದ್ದವ, ನನ್ನ ಶಿಷ್ಯ, ಈಗ ಜಾಲಿ ಕಾವಲು ಸ್ಟುಡಿಯೋದಲ್ಲಿ ಸಿನಿಮಾ ನಿರ್ಮಾಣದಲ್ಲಿ ತೊಡಗಿದ್ದಾನೆ.

ಹೇಳಿದ ಅವನು "ತಗ್ಯೆಣ್ಣ ಯಾತ್ರ ಕತೆ ಬರೀತಿ ? ಸಾಯಿತ್ಯದಗೆ ಏನೈತೇ, ಹಂಗೆ ಹಂಗೆ ಪ್ಪಿಸ್ಕಿ ಮಾಡಿಧಂಗೆ ಗರಂ ಮಾಡ ಒಂದು ಕತೆ ಬರ್ರ್ಕೊಡು. ತಗೋ ಒಂದು ಕಟ್ಟು ಬೀಡಿ"

ಇಂಥಾ ಕೋಂವೆಯಲ್ಲಿ ಜಗತ್ತಿನ ಮೂಲೆ ಮೂಲೆಗಳಿಂದ ಬರುವ ಜನರ ಕ್ಯಾಪಿಟೇಷನ್ ದುಡ್ಡಿನಿಂದ ವಿದ್ಯಾ ಮೇರು ಸಂಸ್ಥೆಯಾದ ಸ್ವಪ್ನಸುಂದರಿ

ಫೌಂಡೇಷನ್ ಕಟ್ಟಿದ ಮಹನೀಯರಿದ್ದಾರೆ. ಅವರು ಸಾಹಿತ್ಯದಲ್ಲಿ ಏನೋ ಇರಬೇಕು ಎಂಬ ಅನುಮಾನದಿಂದ ಮುಗಿಲುಹಳ್ಳಿ ಅಥೇನಿಯಂ ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಅದಕ್ಕೀಗ ವರ್ಷಕ್ಕೆ ಐವತ್ತುಸಾವಿರ ಗ್ರ್ಯಾಂಟು, ಅಬ್ಬಾ, ಎನ್ನಬೇಡಿ, ಒಂದು ಮೆಡಿಕಲ್ ಸೀಟಿನ ಕ್ಯಾಪಿಟೇಷನ್ ಫೀಸಿನ ಅರ್ಧದಷ್ಟೂ ಅಲ್ಲದ ಚೊತ್ತೆ, ತುಕಾಲಿ, ಅಮೌಂಟು ಕ್ಯಾಂಪರನ ಭಯೋತ್ಪಾದಕರ ಶಾಲೆಗೆ ಒಂದು ವಾರಕ್ಕೆ ಕೂಡಾ ಸಾಕಾಗುವುದಿಲ್ಲ. ಆದರೆ ಐವತ್ತು ಸಾವಿರ ಬಿಟ್ಟಿ ಬರುವುದಿಲ್ಲ ಎಂದು ನಮಗೆಲ್ಲಾ ಗೊತ್ತಾಗಿದೆ. ಅದು ಖರ್ಚೂ ಬೀಳುತ್ತಿದೆ. ಹೇಗೆ ಯಾತಕ್ಕೆ ಎಂದು ಕೇಳಲು ನೀವಾರು ನಾನಾರು ?

ಮುಗಿಲು ಹಳ್ಳಿಯ ಮಾಜೀ ಸ್ವಪ್ನಸುಂದರಿ ಚಂದ್ರಮುಖಿಯೇ ಅಥೇನಿಯಂನ ಪ್ರೆಸಿಡೆಂಟ್. ಅಥೇನಿಯಂನ ವ್ಯವಹಾರಗಳನ್ನು ನೋಡಿಕೊಂಡು ಹೋಗುವವನು ಪದ್ದು. ಯಾವ ಪದ್ದು ಎಂದು ನಿಮಗೆ ಗೊತ್ತಿಲ್ಲದಿದ್ದರೆ ಹೇಳುತ್ತೇನೆ. ಅವನು ಚಂದ್ರಮುಖಿಯ ಆಫೀಸ್ ಬಾಯ್. ಕಾಫಿ, ಟೀ, ಊಟಗಳನ್ನು ಸಪ್ಲೈ ಮಾಡುತ್ತಾನೆ. ಅವಳು ಯಾವಾಗ ಎಲ್ಲಿ ನೆನಸಿದರೆ ಅಲ್ಲಿ ಹಾಜರಾಗುತ್ತಾನೆ.

ಕಳೆದ ಡಿಸೆಂಬರ್‌ನಲ್ಲಿ ಚಂದ್ರಮುಖಿ ಪ್ರೊ॥ ಅಶೋಕರನ್ನು ಕರೆಸಿ, ಒಂದು ಸಂಕಲನವನ್ನು ಬರೆದು ಹೊರತರಬೇಕೆಂದು ಅಪ್ಪಣೆ ನೀಡಿದಳು. ಸಂಪಾದಕ ಎಂದು ಪದ್ದು ಹೆಸರು ಇರಬೇಕೆಂದು add ಮಾಡಿದಳು. ಅಶೋಕರು ಚಂದ್ರಮುಖಿ ಸಂಪಾದಕಿಯಾದರೆ ಆ ಕೆಲಸಕ್ಕೆ ಸಿದ್ಧ ಪದ್ದು ಹೆಸರು ಬಿಲ್‌ಕುಲ್ ಆಗುವುದಿಲ್ಲ ಎಂದರು. 'ಇದು ನನ್ನ ಅಪ್ಪಣೆ, ಮಾಡಲೇ ಬೇಕು' ಎಂದಳು, ಚಂದ್ರಮುಖಿ.

ಅಶೋಕರು ನಿರಾಕರಿಸಿದರು.

ಅಶೋಕರು ಹೊರಕ್ಕೆ ಹೋದೊಡನೆ ಅವಳು ಕ್ಲಿಪ್ಪಿರುವ ಪ್ಲೈವುಡ್ ರೊಟ್ಟಿಗೆ ಒಂದು ಹಾಳೆ ಸೇರಿಸಿ ಬರೆದಳು.

ಹಿಟ್ ಲಿಸ್ಟ್

೧) ಪ್ರೊ॥ ಅಶೋಕ್ (ಕೃತಘ್ನ)

೨) ಅವನ ಎಲ್ಲಾ ಬೆಂಬಲಿಗರು.

೩) ಪದ್ದುವಿನ ಅಧ್ಯಕ್ಷಗಿರಿ ವಿರೋಧಿಸಬಹುದಾದ ಎಲ್ಲರೂ.

ಸಂಪಾದಕತ್ವಕ್ಕೂ, ಅಥ ಕ್ಷಗಿರಿಗೂ ಏನುಸಂಬಂಧ! ಆದರೆ ಮಿತ್ರರೇ ವೈಜ್ಞಾನಿಕವಾಗಿ ಯೋಚಿಸುವವರು ಇಲ್ಲವೇ ಇಲ್ಲ; ಏಕೆಂದರೆ ವೈಜ್ಞಾನಿಕ ಪವನೇ ಅವೈಜ್ಞಾನಿಕ. ಯಾರಿಗೂ ಯಾತಕ್ಕೂ ಬಾರದ ಸರಕನ್ನು, ಈಗಿನ ಕಾಲವಲ್ಲಿ ವೈಜ್ಞಾನಿಕ ಎಂದುಬಿಟ್ಟರೆ, ಖಂಡಿತಾ ಮಾರಾಟವಾಗುತ್ತದೆ. ಚಂದ್ರ ಮುಖಿಯ ಆಲೋಚನೆ ಇಷ್ಟೇ. ಸಂಪಾದಕತ್ವ ಪದ್ದುವಿಗೆ ಸಾಧ್ಯವಿಲ್ಲ, ಆದುದ ರಿಂದ ಅವನನ್ನೇ ಅಧ್ಯಕ್ಷನನ್ನಾಗಿ ಮಾಡಿದರೆ, ಐವತ್ತು ಸಾವಿರದ ಆಶೆಗೆ ಸಂಪಾ ದಕತ್ವವನ್ನು ಕೊಡಲು ಸಿದ್ಧರಾಗಿರುವರು ಬೇಕಾದಷ್ಟು ಜನ ಹುಟ್ಟುತ್ತಾರೆ. ಅಲ್ಲದೆ ವೈಜ್ಞಾನಿಕವಾಗಿ ಕಪೋತ ಸಾಂಗತ್ಯವನ್ನು ಸಂಪಾದಿಸಿದವರು ಯಾರು ಇಲ್ಲ, ಅವಳು ಪ್ರೈಮರಿ ಸ್ಕೂಲಿನಲ್ಲಿ ಓದುತ್ತಿದ್ದಾಗ ಅದು ಪಠ್ಯ ಪುಸ್ತಕದಲ್ಲಿ ಇತ್ತು. ಅದನ್ನೇ ಮ್ಯಾಪ್‌ಲಿಥೋ ಪೇಪರಿನಲ್ಲಿ ಪ್ರಿಂಟ್ ಮಾಡಿಸಿ, ಅದರ ಮೇಲೆ ಹದಿಹರೆಯದ ಹುಡುಗಿಯ ಚಿತ್ರ ಹಾಕಿ ಬಿಟ್ಟರೆ ಘನವಾಗಿರುತ್ತದೆ. ಈ ಆಲೋಚನದೇನು ಚುಂಗು. ಏನೋ ಆಫೀಸಿಗೆ ಬರುವ ಕಾಗದ ಓದಿ ಉತ್ತರ ಬರೆದು ಸೈನ್ ಹಾಕಲು ಇಡುತ್ತಾನೆ ಅಂತ ಕರೆದು ಹೇಳಿದರೆ ಲೋಟ್ ಅಂದನೋ. ನೋಡಿಕೊಳ್ಳುತ್ತೇನೆ; ನಾನು ಒಲಿದರೆ ನಾರಿ ಮುನಿದರೆ ಮಾರಿ. ಕೆರಳಿರುವುದರಿಂದ ಹೆಮ್ಮಾರಿ ಅಶೋಕನನ್ನು ಇಡೀ ನುಂಗಿಬಿಟ್ಟೇನು ಎಂದುಕೊಂಡಳು.

ಇತ್ತ ಚಂದ್ರಮುಖಿ ಅಶೋಕರಿಗೆ ಕೊಟ್ಟ ಅಪ್ಪಣೆ ಲೀಕ್ ಆದ ಕ್ಲೋರಿನಿ ನಂತೆ ಸ್ವಪ್ನಸುಂದರಿ ಕಾಲೇಜಿನ ಕ್ಯಾಂಪಸ್ಸಿನಲ್ಲಿ ಹರಡಿತು.

ಚಂದ್ರಮುಖಿಯೋನೋ ಪ್ರಿನ್ಸಿಪಾಲ್. ಪದ್ದು ಯಾರು? ಅವನಿಗೆ ಸಂಪಾದಕ ಪಟ್ಟ ಕೊಡಿಸಲು ಇವಳಿಗೇನು ಆತುರ? ಕಳೆದ ವರ್ಷಗಳ ಗ್ರಾಂಟುಗಳು ಏನಾದವು? ಚಂದ್ರಮುಖಿಗೆ ಸ್ವೆಟರ್ ಕೊಡಿಸಿದವರು ಯಾರೆಂದುಗೊತ್ತು. ಅವಳ ಕಾರು ಎಲ್ಲಿಂದ ಬಂತು? ಅಥೇನಿಯಂ ಗ್ರಾಂಟ್ ಇರುವುದು ಇವಳು ಕಾರು ಕೊಳ್ಳುವುದಕ್ಕೇನು? ಏನು ಪದ್ದು ಕಾರು ಕೊಡಿಸಿದನೋ?

"ಬೇಕಾದ್ದಾಗ್ಲಿ, ಇವಳನ್ನ ತಗೀಬುಕು." ಎಂದು ಹಲವರು ಗೊಣಗಿದರು.

"ಹೆಂಗೆ ತಗಿತಿರಲೇ?"

ಅವರೆಲ್ಲರೂ ಅಥೇನಿಯಂನ ಬದಲಾದ ನಿಯಮಗಳನ್ನು ನೋಡಿದರು, ಅದರಂತೆ ಚಂದ್ರಮುಖಿಯನ್ನು ಅಲುಗಾಡಿಸಲು ಯಾವ ಅವಕಾಶವೂ ಇಲ್ಲ.

ಅಥೇನಿಯಂ ಸಾಹಿತ್ಯ, ಕಲೆಗಳಿಗೆ ಮುಡುಪಾದ ಸಂಸ್ಥೆ. ಅದರ ಅಧ್ಯಕ್ಷರು ಸಾಹಿತಿಗಳೋ ಕಲಾವಿದರೋ ಇರಬೇಕು. ಕಳೆದ ವರ್ಷದ ಗ್ರ್ಯಾಂಟು ಖರ್ಚಾಗಿದೆ, ಚಟುವಟಿಕೆಗಳೇ ಇಲ್ಲ. ಚಂದ್ರಮುಖಿ ಅಸಾಹಿತಿ, ಅಕಲಾವಿದೆ. ರಾಜೀನಾಮೆ ಕೊಡಲಿ.

ಅಥೇನಿಯಂ ಆಡಳಿತ ಮಂಡಳಿಯ ಸದಸ್ಯರಿಗೆ ಇದೇ ಛಾನ್ಸ್ ! ಎಂದು ಹೊಳೆಯಿತು, ಅವರೆಲ್ಲರೂ ಅವಳ ಮನೆಗೆ, ಆಫೀಸಿಗೆ ಯಾವಾಗಲೆಂದರೆ ಆಗ ಮುತ್ತಿಗೆ ಹಾಕಲಾರಂಭಿಸಿದರು. ಈಗಲಾದರೂ ಬಾಡಿಹೋದ ದೇಹಕಾಂತಿಯ, ಸೆಟ್ ಹಾಕಿದ ಜಡೆ ಮುಡಿಯ, ಹಿಂದೆಂದೋ ಹಲವು ಜನರನ್ನು ಮೋಹಗೊಳಿಸಿದ ನಗೆಯ ಚಂದ್ರಮುಖಿಯ ಸಾನ್ನಿಧ್ಯ, afterall ಹುಟ್ಟಿದಮೇಲೆ ಒಮ್ಮೆ ಸಿಕ್ಕುವ ಹಾಗಾಯಿತಲ್ಲ !

ಚಂದ್ರಮುಖಿ, ಆಫೀಸ್ ಸೂಪರಿಂಟೆಂಡೆಂಟ್ ಎರಗುಂಟೆಯವರ ಸಹಾಯ ದಿಂದ, ಫೌಂಡೇಷನ್ ಅಧ್ಯಕ್ಷರಿಗೊಂದು ಪತ್ರ ಬರೆಸಿದಳು, ಗೆ|| ಮಾಕುಂಟೆ ಬಿಸಾಟಪ್ಪನವರಿಂದ.
ಮಾನ್ಯರೇ,

ಚುನಾವಣೆಗಳಲ್ಲಿ ಗೆಲುವಿನ ಸಂಭವನೀಯತೆಯೇ ಇಲ್ಲದ ಹತಾಶೆಯಿಂದ ಅಥೇನಿಯಂ ಅಧ್ಯಕ್ಷೀಯ ವಿರೋಧಿಗಳು ಅವಳು ಅಸಾಹಿತಿ ಅಕಲಾವಿದೆ ಎಂಬ ದೂರಿತ್ತಿದ್ದಾರೆ. ಶ್ರೀ ಪದ್ದು ಅವರು ಹಲಮುಖದ ಬರವಣಿಗೆಯಲ್ಲಿ ಖ್ಯಾತರು. ಈ ಕೆಲಸಕ್ಕೆ ಬರುವ ಮುನ್ನ ಸಿನಿಮಾ ಜಾಹಿರಾತು ಬೋರ್ಡ್ ಬರೆಯಲು ಪೇಂಟ್ ಡಬ್ಬಿ ಒದಗಿಸುತ್ತಿದ್ದರು. ಈಗಲೂ ಆಫೀಸಿಗೆ ಬರುವ ಕಾಫಿ ವೌಚರ್ ಗಳನ್ನು ಅವರೇ ಬರೆಯುತ್ತಿದ್ದಾರೆ. ವಿರೋಧಿಗಳು ಅಧ್ಯಕ್ಷ ಪದವಿಗೆ ಅರ್ಹ ಅಭ್ಯರ್ಥಿಯನ್ನೇ ಆರಿಸದ ಈ ವಿಷಪೂರಿತ ಪ್ರಚಾರ ಆರಂಭಿಸಿದ್ದಾರೆ ಬಹುಶಃ ಪ್ರೊ|| ಅಶೋಕ್ ಅವರ ಅಭ್ಯರ್ಥಿ, ಈ ಪರಮ ಸ್ವಾರ್ಥಿಯು ಎಂ.ಎ, ಪದವೀಧರ ನಾಗಿರುವುದರಿಂದ ಇವನು ಶ್ರಮಿಕ ವಿರೋಧಿ. ಮೇಲಾಗಿ ಇವನು ಹಿಂದು. ಆದುದರಿಂದ ಪ್ರತಿಗಾಮಿ, ಆದುದರಿಂದ ಜಾತೀಯವಾದಿ, ಆದುದರಿಂದ ಕೋಮು ವಾದಿ, ನೀವು ಯಾವ ನಿರ್ಣಯವನ್ನು ತೆಗೆದುಕೊಳ್ಳಕೂಡದು. ಎಮ್ಮೆಹಟ್ಟಿ ಕಲ್ಲೇಶನಾಣೆ.

ಇಂತೀ ನಿಮ್ಮ ವಿಶ್ವಾಸಿ
ಮ|| ಬಿಸಾಟಪ್ಪ

'ಕರ್ಣಪಿಶಾಚಿ' 'ಛಟ ಛಟ' ಪತ್ರಿಕೆಗಳು ಈ ಪತ್ರವನ್ನು ಫ್ರಂಟ್ ಪೇಜಿನಲ್ಲಿ ಹಾಕಿದಾಗ ಮುಗಿಲುಹಳ್ಳಿ ಎಚ್ಚೆತ್ತಿತು. ಮತದಾರರು ಯಾರು ? ಅಭ್ಯರ್ಥಿ ಯಾರು ? ಚುನಾವಣೆ ಎಂದು ? ಸಾಹಿತ್ಯ ಎಂದರೇನು ? ಅದಕ್ಕೆ ಗ್ರ್ಯಾಂಟ್ ಯಾಕೆ ಬೇಕು ?

ಪುರಸಭಾ ಸಭೆಯಲ್ಲಿ ಈ ವಿಷಯ ಎದ್ದಾಗ, ಅಧ್ಯಕ್ಷರು ಇದು ನಗರದ ಆರೋಗ್ಯ, ರಸ್ತೆ, ನೀರು ಸರಬರಾಜು, ಬಿಲ್ಡಿಂಗ್ ನಿವೇಶನ, ಒಳಚರಂಡಿ ಇದಾವುದಕ್ಕೂ ಸಂಬಂಧಿಸಿಲ್ಲವೆಂದು ಆ ಪ್ರಶ್ನೆಗೆ ಅವಕಾಶಕೊಡಲಿಲ್ಲ. ವಿರೋಧ ಪಕ್ಷದವರು ಸಭೆಗೆ ಬಂದೇ ಇರಲಿಲ್ಲ. ಕೆಲವರು ಇದಕ್ಕು, ಜನಜೀವಕ್ಕೂ, ಶಾಂತಿ ಸುವ್ಯವಸ್ಥೆಗೂ ಯಾಕೆ ಸಂಬಂಧವಿರಬಾರದು ಎಂದಾಗ, ಅಧ್ಯಕ್ಷರು 'ಯಾರು ಎಲೆಕ್ಟಾಗುತ್ತಾರೋ ಅವರಿಗೆ ಸನ್ಮಾನ ಮಾಡಿದರಾಯ್ತು, ಹೋಗ್ಲಿ ಒಂದೈನೂರು' ಎಂದರು.

ಕಾಲೇಜಿನ, ಹೈಸ್ಕೂಲಿನ ಮೇಷ್ಟರುಗಳೂ, ಹುಡುಗರೂ ಸಭೆ ಮಾಡೇ ಮಾಡಿ. ಅಶೋಕನೇ ಅಭ್ಯರ್ಥಿ ಅವನಿಗೇ ನಮ್ಮ ಓಟು ಎಂದು ಬಡಿದು ಕೊಂಡಿದ್ದೂ ಬಡಿದುಕೊಂಡದ್ದೇ.

ಕೊನೆಗೆ ಅವಧಿ ಮಧ್ಯದ ಚುನಾವಣೆ ಆದರಿಂದ ಆಡಳಿತ ಸಮಿತಿ ಸದಸ್ಯರೇ, ಅವರು ಮಾತ್ರವೇ ಓಟರುಗಳು ಎಂಬ ಅಂಶ ಹೊರಬಂತು.

ಆಡಳಿತ ಸಮಿತಿಯ ಸದಸ್ಯರು ಹದಿನೇಳು ಜನ, ಬರಗಾಲ, ಯಾಪಾರ ಸಾಪಾರ ಇಲ್ಲ, ರೊಕ್ಕವೆಲ್ಲಾ ಎಂಟರ್‌ಪ್ರೈಸುಗಳು ಏಜನ್ಸಿಗಳಲ್ಲೇ ಚಲಾವಣೆಯಾಗುತ್ತಾ ಇದೆ. ಇದ್ರೊಳಗೆ ಇದೆಲ್ಲೇ ಬಂತಪ್ಪ ಪ್ರಾರಬ್ಧ ಸಾಯಿತ್ಯ, ಎಂದು ತಲೆಮೇಲೆ ಕೈ ಹೊತ್ತರು.

ಚಂದ್ರಮುಖಿ ಓಟಿಗೆ ನಿಂತಿದ್ದರೆ ಸುದ್ದಿ ಬೇರೆ, ಯಾವನ್ಲೇ ಇವನು ಪದ್ದು ಇವ್ನಾಪ್ನ ನಮ್ಮ ಪೈಕಿ ಯಾರ್ನಾರ ನಿಲ್ಸಿದ್ರೆ ಆಗ್ತಿತ್ತಲ್ಲ, ಎಂದು ಚಡಪಡಿಸಿದವರೂ ಉಂಟು.

ಅಶೋಕರನ್ನ ವುಸಲಾಯಿಸಿ ಪದ್ದುವಿನ ಎದುರು ನಿಲ್ಲಿಸಲಾಯಿತು. ಸತ್ಯ, ಹೋರಾಟ ಸಾಹಿತ್ಯ ಕಲೆಗಳ ಅಳಿವು–ಉಳಿವು ಎಂಬ ಮಾತುಕತೆಗಳು ಬಂದವು.

ಆದರೆ ಇವೆಲ್ಲಾ ಕೇವಲ ಹದಿನೇಳೇ ಜನರ ಮತದ ಮೇಲೆ ನಿಂತಿರುವುದ ರಿಂದ, ಎಂಟು ಜನರನ್ನು ಘೇರಾಯಿಸಿ ಬಲವಂತದಿಂದ ಅಶೋಕರ ಪರ ತಿರುಗಿಸ ಲಾಯ್ತು. ಇನ್ನೆಂಟು ಜನರು ಚಂದ್ರಮುಖಿಯ ಬಕ್ಕಣ (ಜೇಬು) ಕ್ಕೆ ಬಿದ್ದರು. ಉಳಿದ ಏಕೈಕ ಸದಸ್ಯ ಬ. ಭೂತ, ಮಲ್ಲಪ್ಪ. ಅವನು ಮುಗಿಲುಹಳ್ಳಿಯ ಅವನ ವಿಳಾಸದಲ್ಲಿರಲಿಲ್ಲ. ಅಲ್ಲಿದವನು ಕೇಸರ್‌ದಾಸ್, ಅವನ ಪತ್ನಿ ಹೀರಾಬಾಯಿ.

ಚಂದ್ರಮುಖಿ ಅಶೋಕರಿಗೆ ಒಂದು ಪತ್ರ ಬರೆದಳು,

ಪ್ರಿಯ ಅಶೋಕ್,

ಸತ್ಯ ಎಂದೂ ಗೆದ್ದಿಲ್ಲ (ಕತೆ, ಸಿನಿಮಾ, ಕಾದಂಬರಿಗಳಲ್ಲಿ ಬಿಟ್ಟು) ಕಪಟಕ್ಕೆ ಎಂದೆಂದೂ ಎಲ್ಲೆಲ್ಲೂ ಜಯ. ಕಪಟಕ್ಕೆ ಸಾವಿರ ಗೆಲವುಗಳು ದೊರೆತಮೇಲೆ ಸತ್ಯ ಗೆದ್ದರೇನು ಬಿಟ್ಟರೇನು !

ಒಂದಂತೂ ಸತ್ಯ, ಪದ್ದುಗೆ ಜಯ ಕಟ್ಟಿಟ್ಟಿದ್ದು ಗ್ರಾಂಟುಗಳು ಅವನ ಬಾಯಿಗೇ ! ನಿನ್ನ ಮಿತ್ರರೂ ನೀನು ಸಾಹಿತ್ಯ ಸೇವೆ ಮಾಡುತ್ತಾ ನವೆಯಿರಿ.

ನಿನ್ನ ಸ್ನೇಹ ಕಪಟ ಮೂಲವಾದದ್ದು, ದ್ರೋಹಬೀಜದಿಂದ ಕೂಡಿದ್ದು. ಗೆದ್ದರೆ ನೀನೇ ಗಂಡು ಬ. ಭೂತ. ಮಲ್ಲಪ್ಪನನ್ನು ಬಸಾಪುರ, ಬಡಗವಳ್ಳಿ, ಬಚ್ಚ ಬೋರನ ಹಟ್ಟಿಗಳಲ್ಲಿ ಹುಡುಕಬೇಡ.

ಇಂತು
ಚಂದ್ರಮುಖಿ

ಕನ್ನಡ ಕಲೆ, ಸಾಹಿತ್ಯಗಳು ಮುಖಬಾಡಿಸಿಕೊಂಡು ದೈನ್ಯದಿಂದ ಮುಗಿಲು ಹಳ್ಳಿಯ ಕನ್ನಡಿಗರಿಗೆ ಕೈಮುಗಿದು ಬೇಡಿಕೊಳ್ಳುತ್ತಿದ್ದವು. ಮುಗಿಲುಹಳ್ಳಿಯ ಕನ್ನಡಿಗರದು ಒಡೆದ ಮನೆ, ಒಡೆದ ಮನೆ ಭದ್ರವಾಗುವುದೇ.

ಮುಂದಿನ ಕಥೆ ರಸವತ್ತಾದದ್ದು, ಸಂಕ್ಷಿಪ್ತವಾದದ್ದು, ಪದ್ದು ಎಂಟು, ಅಶೋಕರಿಗೆ ಎಂಟು ಮತ ಬಿದ್ದವು. ಭೋಪಾಲದಿಂದ ಬಭೂತ್‌ಮಲ್ ಖಾಲಿ ಮತ ಚೀಟಿ ಅಂಚೆಯಲ್ಲಿ ಬಂದಿತ್ತು, ಚಂದ್ರಮುಖಿ ಸ್ವಹಸ್ತದಿಂದ ಪದ್ದುಗೆ ಓಟು ಹಾಕಿದಳು.

ನೀತಿ ವಿಶ್ವಸಂಕೋಚಗೊಳ್ಳುತ್ತಿದೆ, ಕನ್ನಡದ ಹಿತಾಸಕ್ತಿ ಅ-ಕನ್ನಡಿಗರ ಕೈಲಿದೆ, ಎಂದು ಚಂದ್ರಮುಖಿಯ ವದನಾರವಿಂದದಿಂದ ನುಡಿ ಮುತ್ತು ಹೊರ ಬಿತ್ತು. ಬುದ್ಧಿ ಇಲ್ಲದೆ ಕೈತೋರಿಸಿ ಬಿಗಾಡಾವು ಮಾಡಿಕೊಂಡರು—ಅಶೋಕ್.

16

ರಾಘಣ್ಣಿ ಟಿ. ವಿ. ಪ್ರೊಡ್ಯೂಸರ್

—ಕೇಫ

ನಮ್ಮ ಮೈಗಳ್ಳರ ಸಂಘದಲ್ಲಿ ಅಂದು ಗುಲ್ಲೋ ಗುಲ್ಲು. ಒಬ್ಬರ ಮೇಲೊಬ್ಬರು ಬ್ರೆಡ್‌ಚೂರು ಅಥವಾ ಚಟ್ನಿ ಬಿಸಾಡೋದು ಇನ್ನೊಬ್ಬರ ಲಿವ್‌ಕಾಲಿಕ್ವಟರ್ ಸುರಿಯೋದೂ– ಅಥವಾ ಒಬ್ಬರ ಕಿವಿ ಹತ್ರ ಸಡನ್ನಾಗಿ ಸೋಡಾ ಬಾಟಲ್ ಓಪನ್ ಮಾಡೋದೂ – ಮಾಮೂಲು. ಆದರೆ ರಾಘಣ್ಣಿ ತಾನು ಟೀವೀಲಿ ಒಂದು ಪ್ರೋಗ್ರಾಂ ಕೊಡೋಕೆ ಪರ್ಮಿಟ್ ಸಂಪಾದ್ಸಿದ್ದೀನಿ– ಅಂತ ಹೇಳಿದ ತಕ್ಷಣ ಸಂಘದ ಹಾಲಿನಲ್ಲಿ ಒಂದು ಕುರ್ಚಿಯೂ ನೆಲದ ಮೇಲಿರಲಿಲ್ಲ. ಖಾಲೀಲಿರ್ತಿತ್ತು ಅಥವಾ ಇನ್ನೊಬ್ಬರ ತಲೇಮೇಲಿರ್ತಿತ್ತು. ಅಷ್ಟು ಸಂತೋಷ ಎಲ್ರಿಗೂ!

ವಾತಾವರಣ ಸ್ವಲ್ಪ ಶಾಂತವಾದ ಮೇಲೆ, ರಾಘಣ್ಣೀನ ಒಂದು ಟೇಬಲ್ ಕೆಳಗಿಂದ ಎಳೆದು, ಕಾಲು ಮೇಲಾಗಿದ್ದ ಕುರ್ಚೀನ ಸರಿಯಾಗಿಟ್ಟು, ರಾಘಣ್ಣೀನ ಕೂರಿಸಿ–ನಾವೆಲ್ಲಾ ಕೇಳಿದೆವು– "ಏನು ಕಥೆ ಮಾಡ್ತೀ ?" ಅಂತ.

"ಏನಾದ್ರೂ ಎಂಟರ್‌ಟೈನ್‌ಮೆಂಟಿರಬೇಕು" ಅಂದ.

"ಬಿ.ಟಿ.ಎಸ್.ನಲ್ಲಿ ಟ್ರಿಪ್ಪು .... "ಶುರುಮಾಡಿದ ಕಿಟ್ಟಿ.

"ಅದು ಹಳೇದಯ್ಯ–ಹೊಸ ಐಡಿಯಾ ಕೊಡು"

"ಒಂದು ವೇಳೆ ..."

"ಅದು ಬೇಡ– ಬೇರೆ ಹೇಳು "

"ಹಾಗಾದ್ರೆ ಈ ರೀತಿ ಇದ್ರೆ.... "

"ಸೂಟಾಗೊಲ್ಲ– ಬೇರೆ ಯೋಚಿಸು– ಕಿಟ್ಟಿ"

"ಯುರೇಕಾ ! ಒಂದು ಫ್ಯಾಮಿಲಿ ಕಥೆ !"

"ಹಾ ! ಫ್ಯಾಮಿಲೀ ಕಥೆ ಬೆಸ್ಟು ! ಅಂದ ರಾಘಣ್ಣಿ.

“ಒಂದು ಫ್ಯಾಮಿಲಿ ಇರುತ್ತೆ. ಒಬ್ಬ ತುಂಬಾ ಒಳ್ಳೆ ಆಸಾಮಿ ಇರ್ತಾನೆ....”

“ಯಾವ ಜಾತಿಯೋನು ? ಅವನು ದಲಿತನಾಗಿರಬೇಕು”

“ಆಲ್‌ರೈಟ್ – ದಲಿತ. ಶಂಕರ್‌ನಾಗ್ ರೋಲು ...”

“ಅವನಿಗೆ ಯಾರೂ ಹೆಣ್ಣೇ ಕೊಡೊಲ್ಲ–ಆದ್ರೆ ಒಬ್ಬ ಸಾವ್ಕಾರ ಇರ್ತಾನೆ....”

“ಯಾವ ಜಾತಿ ?”

“ಮಧ್ಯ ಬಾಯಿ ಹಾಕ್ಬೇಡ ರಾಘಣ್ಣ– ಹೈಕ್ಯಾಸ್ಟ್ ಫೆಲೋ ಅಂತ ಇಟ್ಕೋ– ಎಂ. ಪಿ. ಶಂಕರ್ ರೋಲು ಅವನಿಗೆ ಒಬ್ಬ ಡಾಟರ್ರು....”

“ಯಾವ ಜಾತಿ ? ಕ್ಷಮ್ಸು ಕಿಟ್ಟಿ ಪ್ರೊಸೀಡ್”

ಡಾಟರ್ರು ಓದ್ದೋಳು ಬಟ್–ತುಂಬಾ ಮಾಡೆಸ್ಟು – ಸುಹಾಸಿನೀಗೆ ಲಾಯಕ್ಕಾದ ರೋಲು....

“ಅಂದ್ರೆ ಶಂಕರ್‌ನಾಗ್‌ಗೂ ಎ. ಪಿ. ಶಂಕರ್‌ಗೂ ಲಡಾಯಿ ಅನ್ನು ! ಬ್ಯೂಟಿಫುಲ್ ! ಕಿಟ್ಟೀ ಇನ್ನು ನಿನ್ನನ್ನ ಡಿಸ್ಟರ್ಬ್ ಮಾಡೊಲ್ಲ– ಕಥೆ ತುಂಬಾ ಚೆನ್ನಾಗಿದೆ.

“ಈಗ ಟ್ರಯಾಂಗಲ್ ತರಬೇಕು. ಟ್ರಯಾಂಗಲ್‌ನ ಅಕ್ಯೂಟ್ ಆಂಗಲ್ಲು– ಸುಹಾಸಿನೀ ಕ್ಲಾಸ್‌ಮೇಟು ಮತ್ತು ವಿಲನ್ನು – ಪ್ರಭಾಕರ್ ಅಂಥಾವೋನು....”

“ಸ್ಪ್ಲೆಂಡಿಡ್ ! ಶಂಕರ್‌ನಾಗ್–ಪ್ರಭಾಕರ್ ಫೈಟು ! ಸ್ಸಾರಿ – ಮುಂದೆ ಹೇಳು ಕಿಟ್ಟಿ”

“ಪ್ರಭಾಕರ್–ಐಮೀನ್ ವಿಲನ್ನು ಸ್ಕೂಲ್ -ಡ್ರಾಪೌಟು ಸ್ಕೂಲಿಂದ ಡ್ರಾಪೌಟಾದ್ರೆ ಏನು ಅನಾಹುತಾ ಆಗುತ್ತೇ ಅಂತ ತೋರಿಸ್ಬೇಕು - ಟೀವೀಲಿ....”

“ತೋರಿಸ್ತೇನೆ ಕಿಟ್ಟಿ. ನಾನೂ ಡ್ರಾಪೌಟ್ ತಾನೆ ? ಹೇಳು ಮುಂದೆ ....”

“ಇಲ್ಲಿ ಫ್ಲಾಷ್ ಬ್ಯಾಕು ಕೊಡು – ಸ್ಕೂಲಿನಲ್ಲಿ ಪ್ರಭಾಕರ್ ಅಥವಾ ವಿಲನ್ನು– ಮೇಷ್ಟ್ರುಗಳು ಕೂರೋಜಾಗಕ್ಕೇ ಇಂಕು ಹಾಕೋದು....”

„ಅದಾಗೊಲ್ಲ – ಈಗೆಲ್ಲಾ ಹಾಳು ಬಾಲ್‌ಪಾಯಿಂಟು....”

"ಹಾಗಾದ್ರೆ ಫಿಲಿಕಾಲ್ ಮೆತ್ತಭೋದು–ಇಂಥಾವನ್ನೆಲ್ಲಾ ತೋರಿಸ್ಬೋದು. ಈ ಮಧ್ಯೆ ಶಂಕರ್‌ನಾಗ್‌ಗೆ ವಿದ್ಯಾ ಕಲೀಬೇಕು ಅನ್ನೋ ಆಸೆ ಬರುತ್ತೆ. ಪುರಸ್ಕರ ಶಿಕ್ಷಣಕ್ಕೆ ಕುಮ್ಮಕ್ಕು ! ವಿದ್ಯೆ ಕಲೀತಾನೆ. ಸೀಕ್ರೆಟ್ಟಾಗಿ ಸುಹಾಸಿನಿ ಅವನಿಗೆ ಟ್ಯೂಷನ್ ಕೊಡ್ತಾಳೆ. ಒಂದು ದಿನ ಇದನ್ನ ಎಂ. ಪಿ. ಶಂಕರ್ ನೋಡಿ ಬಿಡ್ತಾನೆ. ಇನ್ನೇನು ಶಂಕರ್‌ನಾಗ್‌ನ ತನ್ನ ಡಬಲ್ ಬ್ಯಾರಲ್ ಗನ್ನಿಂದ ಶೂಟ್ ಮಾಡ್ಬೇಕು – ಆಗ ಸುಹಾಸಿನಿ ಅಡ್ಡ ಬಂದು ನಿಂತ್ಕೊತ್ತಾಳೆ. ಅವಳಿಗೆ ಅಡ್ಡವಾಗಿ ತಾಯಿ ಬರ್ತಾಳೆ...."

"ಪಂಡ್ರೀಬಾಯಿ, ಆರ್ ರಾಜಮ್ಮ ಮುಂದೆ ?

"ಅಥವಾ ಪಾಪಮ್ಮ ಆಗಭೋದು. ಅಪ್ಪ ಬಂದೂಕಿನ ಟ್ರಿಗ್ಗರ್ ಎಳೀಬೇಕು–ಆಗ ಅವನಿಗೆ ಲಕ್ವಹೊಡೆದು ಬಿಡುತ್ತೆ....

"ಷಭಾಷ್ !"

"ಯಸ್ ಆ ಮೊಮೆಂಟಿನಲ್ಲಿ ಸುಹಾಸಿನಿ, ಪಂಡರೀಬಾಯಿ ಅಥ್ವಾ ಪಾಪಮ್ಮ-ಶಂಕರ್‌ನ ಮಲಗಿಸಿ ಶಿಶ್ರೂಷೆ ಮಾಡ್ತಾರೆ–ಪ್ಯಾಥೆಟಿಕ್ ಸೀನು–ಆಗ ವಿಲನ್–ಪ್ರಭಾಕರ್ ಬರ್ತಾನೆ—"

"ತಾಳು ಕಿಟ್ಟಿ. ಮುಂಚಿನ ಸೀನ್ ನಾನು ಕನ್‌ಸ್ಟ್ರಕ್ಟ್ ಮಾಡ್ತೀನಿ– ವಿಲನ್ನು ಇದೇ ಮೊಮೆಂಟ್ ಅಂತ ಹೀರೋಯಿನ್ನ ಅಬ್‌ಸ್ಕಾಂಡ್ ಮಾಡ್ತಾನೆ ..."

"ಅಬ್ಸ್‌ಕಾಂಡಲ್ಲ – ಎಲೋಪ್ "

"ಎರಡೂ ಬೇಡ – ಹಾರ್ಸಿಕೊಂಡು ಹೋಗ್ತಾನೆ- ತನ್ನ ಹೈಡೌಟ್‌ಗೆ ನಂದೀ ಬೆಟ್ಟ ಅಥ್ವಾ ಚಿತ್ರದುರ್ಗದ ಕೋಟೆಗಳು – ನಮ್ಮ ಕರ್ನಾಟಕದ ಟೂರಿಸ್ಟ್ ಅಟ್ರಾಕ್ಷನ್ನು---"

"ನಮ್ಮ ಎಂ. ಎಲ್. ಎ. ಎಂ. ಪಿ.ಗಳನ್ನು ಬಿಟ್ರೆ ಹೇಳು ..."

"ಅಲ್ಲಿ ಪ್ರಭಾಕರ್‌ಗೆ ಹಾವು ಕಚ್ಚುತ್ತೆ....."

"ಗುಡ್ ! ಕ್ರೈಮ್ ಡಸ್‌ನಾಟ್ ಪೇ..."

"ವಿಲನ್ನು ಸಾಯೋದಿಲ್ಲ–ಲಂಗ್ಡಾ ಆಗಿಬಿಡ್ತಾನೆ–ಹೀರೋಯಿನ್ ಅಂದ್ರೆ ಸುಹಾಸಿನಿ–ವಿಲನ್ನಿನ ಅಂದ್ರೆ ಪ್ರಭಾಕರ್‌ನ ಹಿಂದಿನ ಫ್ಲೇಮ್ಸ್‌ನೆಲ್ಲಾ ಮೀಟ್ ಮಾಡ್ತಾಳೆ...."

"ಜಯಮಾಲಿನಿ ಗ್ರೂಪು ...

"ಯಸ್– ನಂಗೂ ಅದೇ ಮನಸ್ಸಿನಲ್ಲಿದ್ದದ್ದು. ಈಗ ಸುಹಾಸಿನಿ-ಆ ಗರ್ಲ್ಸ್‌ಗೆಲ್ಲಾ ಸೀಕ್ರೆಟ್ಟಾಗಿ ಕರಾಟೆ ಟ್ರೈನಿಂಗ್ ಕೊಡ್ತಾಳೆ...."

"ಯು ಆರ್ ಎ ಜೀನಿಯಸ್ ರಾಘಣ್ಣ ! ಇಲ್ಲಿ ನೀನೊಂದು ಡ್ರೀಂ ಸೀಕ್ವೆನ್ಸ್ ಕೊಡು. ಸುಹಾಸಿನಿ ಕನಸಿನಲ್ಲಿ ಕಿತ್ತೂರು ಚೆನ್ನಮ್ಮ – ಓಬವ್ವೆ ಇವರುಗಳೆಲ್ಲಾ ಕಾಣಿಸ್ತಾರೆ-ನಮ್ಮ ಹಿಸ್ಟಾರಿಕಲ್ ಹೆರಿಟೇಜು – ಗುರುವಾರ ಬಂತಮ್ಮ ಕೂಡ ಸೇರಿಸ್ಬೋದು..."

"ಕಿಟ್ಟಿ– ನೀನು ಹೇಳೋದು ಒಳ್ಳೆ ಐಡಿಯಾ – ಆದ್ರೆ ಟೀವೀಲಿ ನಮಗೆ ಸಿಕ್ಕೋದು ಅರ್ಧ ಘಂಟೆ ಮಾತ್ರ. ಸ್ಟೋರೀನ ಮುಗ್ಸಿಬಿಡಬೇಕು...."

''ಹಾಗಾದ್ರೆ–ಪ್ರಭಾಕರ್‌ಗೆ ಬುದ್ಧಿ ಬಂದುಬಿಟ್ಟು–ಶಂಕರ್‌ನಾಗ್‌ಗೆ ಹೀರೋಯಿನ್‌ಗೆ ಮದ್ವೆ ಅವನೇ ಮಾಡಿಸೋ ಹಾಗೆ ಎಂಡ್ ಮಾಡ್ಲೆ ? ''

''ಹೌದು ಎಂ. ಪಿ. ಶಂಕರ್‌ಗೆ ಲಕ್ಷ್ಯ ಹೊಡೆದಿರೋದ್ರಿಂದ ಅದು ಒಳ್ಳೇ ಎಂಡಿಂಗು.'' ಅಂದ ರಾಘಣ್ಣ.

''ಈಗ ನೋಡು – ರಾಘಣ್ಣ. ನಮ್ಮ ಟೀವೀಗೆ ಬೇಕಾದ್ದೆಲ್ಲಾ -ಇದೆ– ಫ್ಯಾಮಿಲೀ ವಾತಾವರಣ, ದಲಿತ ಹೀರೋ ಕಲಿತ ಹೀರೋಯಿನ್ನು– ಮೇಲ್ಜಾತಿಯೋಳು – ಕ್ಲಾಸ್‌ವಾರ್ ಫೇರು–ಕ್ರೈಮ್ ಡಸ್ನಾಟ್‌ಪೇ – ಎಲ್ಲಾ ಇದೆ"

ರಾಘಣ್ಣ ಚಿಂತಾಕ್ರಾಂತನಾದ.

"ಕಿಟ್ಟಿ, ಇಷ್ಟು ಕೂಡ ಅರ್ಧ ಘಂಟೇಲಾಗುತ್ತೆ ? ಅದರಲ್ಲಿ ಸೋಪು, ಚಾಕ್‌ಲೆಟ್ಟು, ಮ್ಯಾಗಿ, ಬ್ಲೇಡು ಎಲ್ಲಾ ಸೇರಿಸ್ಬೇಕು !''

ಆ ಸಮಯಕ್ಕೆ ಬಾಬು ಬಂದ

''ಏನೋ – ದೋಸ್ತಿಗೈಲ್ಲಾ ರಾಘಣ್ಣೀಗೆ ಗೇರಾಯಿಸ್ಕೊಂಡಿದ್ದೀರಾ ?''' ಅಂತ ಕೇಳಿದ,

ರಾಘಣ್ಣ – ಕಿಟ್ಟಿ ಎಲ್ಲಾ ವಿವರಿಸಿದರು.

''ಅಂಗಾರೆ ಒಂದ್ಕೆಲ್ಸ ಮಾಡು. ಮೊದ್ಲೇ ಹೀರೊ ಹೀರೊಯಿನ್ನು ಮದ್ವೆ ಆಗೋದು ತೋರ್ಸು, ಅವರ ಮುಂದೆ ''ನಿರೂದ್'' ತಸ್ವೀರಿರ್ಲಿ. ಬ್ಯಾಕ್ ಗ್ರೌಂಡ್ ಮ್ಯೂಜಿಕ್ಕು–ರಹನಾಯ್ – ಪಹ್ಲಾ ಅಭೀನಹಿ ದುಸ್ರಾ ಜಲ್ದೀನಹಿ ತಿಸ್ರಾ ಕಭೀ ನಹೀ–ಹಾಡು ಹರ್ತಾ ಇರ್ಲಿ. ಆ ಮೇಲೆ ಅವರ ಮದ್ವೆ ಹೆಂಗಾಯ್ತೂಂತ ಕಥೇನ ಫ್ಲಾಷ್ ಬ್ಯಾಕ್ ತೋರ್ಸು–ಟೈಂ ಸಿಕ್ಕಿದಷ್ಟು .... ಟೀವೀನೋರು ನಿಂಗೆ ಗಾರ್ಲೆಂಡ್ ಹಾಕ್ತಾರೆ'' ಅಂದ ಬಾಬು.

ಬಾಬು ಎಷ್ಟೇ ಆಗ್ಲಿ ಸೈಯದ್ ಖಲಿಂದರ್ ಅಲ್ವೆ !



"ದೇವ್ರೇ ಇಲ್ಲೊಂದು ಪಾತ್ರೆ ಕರುಣಿಸಪ್ಪಾ !"

ಗಣಪನ್ನ ಮಾಡ್ಲೋ ಅಂದರೆ............

—ಸೂರಿ

ನಮ್ಮ ಗುಂಪಿನಲ್ಲೆಲ್ಲಾ ಒಂಟಿ ಮಗೂನ ತಂದೆ ಅಂದ್ರೆ ರಹಮಾನ್ ಒಬ್ಬನೇ. ಉಳಿದವರಲ್ಲಿ-ನನಗೆ, ಸರ್ಕಾರದ ಸೂತ್ರದ ಪ್ರಕಾರ ಒಂದು ಗಂಡು, ಒಂದು ಹೆಣ್ಣು, ಪಾಂಡೂಗೆ ಮೂರು, ಎಲ್ಲಾ ಗಂಡೇ. ಅಯ್ಯಂಗಾರಿಗೆ ಈಗ ಇರೋ ಮೂರೂ ಹೆಣ್ಣು. ಕಡೇ ಚಾನ್ಸು ನೋಡೇ ಬಿಡೋಣ ಅಂತ ಈಗ ನಾಲ್ಕನೆಯದನ್ನೂ ತಯಾರು ಮಾಡ್ತಾ ಇದ್ದಾನೆ ಅಂತ ನಸ್ಪೆಂಡತಿ ವರದಿ.

ಆದರೆ ರಹಮಾನ್ ಕಥೇನೆ ಬೇರೆ. ಮದುವೆಯಾದ ಮೂರು ವರ್ಷಕ್ಕೆ ಒಂದು ಗಂಡು ಮಗು. ಅದಕ್ಕೀಗ ನಾಲ್ಕು ವರ್ಷ. ಐದು ಸಾವಿರ ಡೊನೇಷನ್ ಕೊಟ್ಟು ನರ್ಸರಿ ಸ್ಕೂಲಿಗೆ ಸೇರಿಸಿದ್ದಾನೆ. ಆಫೀಸಿನಿಂದ ಬಂದ ಮೇಲೆ ಮಗನ ಜೊತೆ ಆಟ ಆಡ್ತಾನೋ ಹೆಂಡ್ತಿ ಮಾಡಿ ಹಾಕಿದ ತಿಂಡೀ ತಿನ್ತಾನೋ, ಇಲ್ಲಿ ಕನ್ನಡ ಪದ್ಯಗಳನ್ನು ಓದ್ಕೊಂಡೊ ಹಾಯಾಗಿ ಕಾಲಾ ಹಾಕ್ತಾ ಇರ್ತಾನೆ.

ಆದರೆ ಅವನು ಈ ಥರಾ ಇರೋದು ಅಷ್ಟು ಒಳ್ಳೇದಲ್ಲ ಅಂತ ಮಿಕ್ಕ ನಮ್ಮವರ ಅಭಿಪ್ರಾಯ. ಅಲ್ಲ, ಒಂಟೀವರೆ ಮಗು, ಆಡ್ಕೊಂಡಿರೋಕೆ ಜೊತೆಯಾಗಿ ಒಬ್ಬ ತಮ್ಮನ್ನೋ ತಂಗೀನೋ ತರೋದು ಬಿಟ್ಟು, ಹೋಗ್ತಾ ಬರ್ತಾ ಒಂದೋ ಎರಡೋ Leo Toys ನ ತಂದು ಹಾಕ್ಬಿಟ್ರೆ ತನ್ನ ಕೆಲಸಾ ಮುಗೀತು ಅಂದ್ಕೊಂಡ ಹಾಗೆ ಕಾಣುತ್ತಲ್ಲಾ ಈ ಸಾಹೇಬು, ಇನ್ನೊಂದು ಮಗೂಗೇ ಅಂತ ಪ್ರಯತ್ನ ಮಾಡೋದು ಇರಲಿ, ಅದರ ಬಗ್ಗೆ ಯೋಚ್ನೆ ಕೂಡ ಮಾಡ್ತಾ ಇದ್ದಾಗಿಲ್ಲವಲ್ಲ ಅಂತ ಒಂದು ತರ ಕಳವಳ. ಆದ್ರೆ, ಹಾಗೇಂತ ಅವನಿಗೆ ಹೇಳೋದಾದ್ರೂ ಹೇಗೆ ? ಸ್ವಂತ ವಿಷಯದಲ್ಲಿ ಬಾಯಿ ಹಾಕ್ಕೊಂಡು ಬರಬೇಡಿ ಅಂತ ಎಲ್ಲಿ ಅವನು ರೇಗ್ತಾನೋ ಅಂತ ಹೆದರ್ಕೊಂಡು ಸುಮ್ಮನೆ ಇದ್ವಿ.

ಕಡೇಗೆ ತಡೀಲಾರದೆ ಒಂದು ದಿನ ಅಯಂಗಾರಿ ಹೇಳಿದ "ನೋಡ್ರೋ ಅವನಿಗೆ ಕೋಪಾ ಬರುತ್ತೆ ಅನ್ನೋ ಭಯಕ್ಕೆ ನಾವು ನಮ್ಮ ಕರ್ತವ್ಯಾನ ಮಾಡ್ದೇ ಇರೋಕಾಗುತ್ತಾ ? ನಾಳೆ ಗುರುವಾರ ಹೇಗೂ ಕ್ಲಬ್‌ನಲ್ಲಿ ಸೇರ್ತೀವಲ್ಲಾ, ಆಗ ನಾನೇ ಧೈರ್ಯ ಮಾಡಿ ಮಾತು ತೆಗೀತೀನಿ. ಸಮಯ ನೋಡಿಕೊಂಡು ನೀವೂ ನನಗೆ ಕುಮ್ಮಕ್ ಕೊಡಿ ಸಾಕು"

ಆದರೆ ಅಷ್ಟೆಲ್ಲಾ ಮಾತಾಡಿದ ಅಯ್ಯಂಗಾರಿ ಗುರುವಾರದ ದಿನ ಬಾಯೇ ಬಿಡಲೊಲ್ಲ. ಬೇರೆ ದಿನಗಳಲ್ಲಿ ಅರ್ಧ ಗ್ಲಾಸು ಬೀರು ಒಳಗೆ ಹೋಗ್ತಾ ಇದ್ದಾ ಗೇನೆ ವಟ ವಟ ಅಂತ ಅನ್ನೋನು ಅವತ್ತು ಒಂದು ಬಾಟಲು ಮುಗಿದರೂ ತುಟಿ ಪಿಟಕ್ಕನ್ನದೆ ಕೂತಿದ್ದಾನೆ. ಯಾಕೋ ಇವತ್ತು ಬಂದ ಕೆಲಸ ಆಗೋ ಹಾಗೆ ಕಾಣೊಲ್ಲ, ಸುಮ್ಮನೆ ಕಾಸು ಖರ್ಚಾಯಿತು. ಈ ಅಯ್ಯಂಗಾರಿ ಮಾತು ಕೇಳಿ ನಾವು ನಾಮ ಹಾಕ್ಕೊಂಡ ಹಾಗೆ ಆಯ್ತಲ್ಲಾ ಅಂತ ನಾನು, ಪಾಂಡು ತಲೆಮೇಲೆ ಕೈ ಹೊತ್ಕೊಂಡು ಕೂತಿದ್ವಿ.

ಏನೋ ವಿಷಯ ಇರಬೇಕು ಅಂತ ರಹಮಾನನಿಗೇ ಅನಿಸಿರಬೇಕು.

"ನನ್ಮಕ್ಕಳಾ, ನಿಮಗೆಲ್ಲಾ ಇವತ್ತು ಏನೋ ಆಗಿದೆ ? ಏನೋ ವಿಷಯಾ ಮನಸ್ಸಿನಲ್ಲಿ ಇಟ್ಕೊಂಡು, ಹೇಳೊಕ್ಕೆ ಹಿಂದೇಟು ಹಾಕ್ಕೊಂಡು ಬಿಸಿ ಬೋಂಡ ಬಾಯಿಯಲ್ಲಿ ಇಟ್ಕೊಂಡೋರ ಥರಾ ಒದ್ದಾಡ್ತಿದ್ದೀರಲ್ಲ. ಅದೇನೋ ವಿಷಯ ಒದರಕೋ ಬಾರದೆ ?"

ಅಯ್ಯಂಗಾರಿ ಕಡೆಗೆ ನೋಡಿದೆ, ಮಾತು ಶುರು ಮಾಡೋ ಹಾಗೆ ಕಾಣ ಲಿಲ್ಲ. ಮತ್ತೆ ಪಾಂಡು?–ಡಿಟ್ಟೋ. ಸರಿ, ದೇವರು ಮಾಡಿಸಿದ್ದಾಗಲಿ ಅಂತ ನಾನೇ ವಿಷಯ ಎತ್ತಿದೆ.

"ನೋಡು ರಹಮಾನ್ ಇದು ನಿನ್ನ ಸ್ವಂತ ವಿಷಯಾನೇ ಇರಬಹುದು.... ಆದ್ರೂ ನಿನಗೆ ಈ ಹೊತ್ತಿಗೆ ಇನ್ನೊಂದು ಮಗು ಆಗಿರಬೇಕಾಗಿತ್ತು. ಯಾಕೆ ಇನ್ನಾ ಆಗಲಿಲ್ಲ ಅಂತ ನಮಗೆಲ್ಲಾ ಯೋಚನೆಯಾಗಿದೆ"

"ಹ್ಹ ಹ್ಹ ಹ್ಹ........ ಅಷ್ಟೇನಾ ? ಯಾಕೆ ? ಇಂಡಿಯಾ ದೇಶದ ಜನ ಸಂಖ್ಯೆ ಇಳೀತಾ ಇದೆ ಅಂತ ಏನಾದರೂ ಭಯ ಆಗ್ತಾ ಇದ್ಯಾ ?"

"ಛೆ ಹಾಗೇನೂ ಇಲ್ಲಾ.... ಆದೂರೂ.....ಸರ್ಕಾರವೇ ಹೇಳುತ್ತಲ್ಲ ....."

"ಗೊತ್ತು, ಗೊತ್ತು.......ಶಾದಿಗೊಬ್ಬಳು ಮಗಳು, ಶ್ರಾದ್ಧಕ್ಕೊಬ್ಬ ಮಗ, ಅಂತ ತಾನೇ ? ನಾನು ಆ ಮಾತು ಒಪ್ಪೊಲ್ಲ"

"ಅಲ್ಲ ಕಣೋ ನಿನಗೆ ಮಕ್ಕಳೂ ಅಂದ್ರೆ ಇಷ್ಟ, ಅದರಲ್ಲೂ ಹೆಣ್ಣು ಮಕ್ಕಳೂ ಅಂದ್ರೆ ಪ್ರಾಣಾನೆ ಬಿಡ್ತೀಯ, ಅಂತಾದ್ರಲ್ಲೀ........" ಪಾಂಡುಗೆ ಈಗ ಸ್ವಲ್ಪ ಧೈರ್ಯ ಬರ್ತಾ ಇದ್ದ ಹಾಗೆ ಇತ್ತು.

"ನನಗೆ ಮಕ್ಕಳೊಂದ್ರೆ ಇಷ್ಟಾ ಅನ್ನೋದೇನೋ ನಿಜ, ಆದರೆ ಅದೇನೋ ಹೆಣ್ಣು ಮಕ್ಳು ಅಂತ ಹೇಳಿದ್ಯಲ್ಲಾ ಅದರ ಅಗತ್ಯ ಏನೋ ಗೊತ್ತಾಗಲಿಲ್ಲ"

"ನೋಡೋ ಸಾಹೇಬು, ಏನೂ ತಿಳೀದವನ ಥರಾ ಮಾತಾಡ್ಬೇಡ. ನಾನೇ ಎಷ್ಟೋ ಸಲ ನೋಡಿಲ್ವಾ. ಮಗೂಗೆ ಬಟ್ಟೆ ನೋಡೋಕ್ಕೇಂತ ನಿನ್ನ ಹೆಂಡತಿ ಕಿಡ್ಡೀಸ್ ಕಾರ್ನರ್ ಒಳಗೆ ಹೋದ್ರೆ, ನೀನು ಆಚೇನೆ ನಿಂತ್ಕೊಂಡು ರಸ್ತೇಲಿ ಬರೋ ಹೋಗೋ ಹುಡುಗೀರನ್ನಾ ಬಾಯಿ ಬಾಯಿ ಬಿಟ್ಕೊಂಡು ನೋಡ್ತಾ ಇರೋದನ್ನ ?"

ಸಿಕ್ಕಿ ಬಿದ್ನಲ್ಲಾ ಅಂತ ಒಂದು ನಿಮಿಷ ತಬ್ಬಿಬ್ಬಾದರೂ ಸುಧಾರಿಸಿಕೊಂಡು ರಹಮಾನ್ ತಿರುಗಿಸಿ ಕೊಟ್ಟ.

"ನನ್ನ ವಿಷಯ ಹಾಗಿರಲಿ. ನೀನು ಮಾಡೋದು ? ತರಕಾರೀ ತರ್ತೀನಿ ಅಂತ ಗಾಂಧೀ ಬಜಾರಿಗೆ ಬಂದೋನು ಅಲ್ಲಿ ಹೋಗ್ತಾ ಇರೋ ಕಾಲೇಜು ಹುಡುಗೀರನ್ನ ನೋಡ್ಕೊಂಡು ಹಲ್ಕಿರೀತಾ ನಿಂತ್ಕೊಳ್ಳೋದು ಯಾರಿಗೂ ಗೊತ್ತಿಲ್ಲ ಅಂದ್ಕೊಂಡ್ಯಾ ?"

"ನಾನು ಅವರ್ನ ನೋಡೋ ದೃಷ್ಟೀನೇ ಬೇರೆ. — ಅವರೆಲ್ಲಾ ಸಿಸ್ಟರ್ಸ್ ಥರಾ ನನಗೆ "– ಬಚಾವ್ ಆಗೋದಿಕ್ಕೆ ಪ್ರಯತ್ನ ಮಾಡಿದ ಪಾಂಡು

"ಸಿಸ್ಟರ್ಸ್ ಅಂತೆ ಸಿಸ್ಟರ್ರ್ಸ್ — ಆಹಾಹಾ! ... ಮಗನೇ. ಬಿ. ಎಂ. ಶ್ರೀ ಹೇಳೋ ಹಾಗೆ ನಿಂಗೆ ಹುರುಡು ಮೈಯೊಳಗಿಲ್ಲ, ರೊಕ್ಕ ಕೈಯೊಳಗಿಲ್ಲ ಅಷ್ಟೆ. ಅವೆರಡು ಗಾನ ಏನಾದ್ರೂ ಇದ್ದಿದ್ರೆ....ಹುಂ ಆ ಕಥೆನೇ ಬೇರೆಯಾಗ್ತಿತ್ತು."

ಇಲ್ಲೀ ತನಕಾ ತನಗೂ ಸುತ್ತಾ ನಡೀತಿರೋದಕ್ಕೂ ಸಂಬಂಧವೇ ಇಲ್ಲ ವೇನೋ ಅನ್ನೋ ಥರಾ ಕೂತ್ತಿದ್ದ ಅಯ್ಯಂಗಾರಿ ಈಗ ಅಕೌಂಟ್ ಓಪನ್ ಮಾಡಿದ—

"ನಿಂಗೊತ್ತಿಲ್ಲ, ರಹಮಾನ್—ಮನೇಗಳಲ್ಲಿ ಒಂಟೀವರೆ ಇರೋ ಮಕ್ಳು ಬೆಳೀತಾ ಬೆಳೀತಾ ಬೇಕಾದಷ್ಟು ಕೆಟ್ಟ ಗುಣಗಳನ್ನು ಬೆಳಸಿಕೊಳ್ಳುತ್ತವಂತೆ"

"ಉದಾಹರಣೆಗೆ ?......"ರಹಮಾನ್ ಪ್ರಶ್ನೆ. "ಅವು ಸ್ವಾರ್ಥ ಬೆಳಸಿ ಕೊಳ್ಳುವಂತೆ, ಜಗಳಗಂಟರಾಗಿರುತ್ವಂತೆ. ತಮ್ಮದೇ ನಡೀಬೇಕೂಂತ ಜಿದ್ದು ಹಿಡೀ ತ್ವಂತೆ......

"ಸದ್ಯ. ದೇವರ ದಯದಿಂದ ಹಾಗಾದರೆ ಸಾಕಪ್ಪ. ಅವನಾದರೂ ಸುಖವಾಗಿರ್ತಾನೆ. ನೀನೇ ನೋಡ್ತಿದ್ದೀಯಲ್ಲಾ ಒಳ್ಳೇಯವನ್ನಾಗಿ ನಾವೆಲ್ಲ ಅನುಭವಿಸ್ತಾ ಇರೋ ಪಾಡ್ನ"

"ಅಷ್ಟೇ ಅಲ್ಲ. ಒಂಟೀ ಮಗೂನ ತಂದೇ ತಾಯೀಯರಿಗೂ ಕೂಡ ಎಷ್ಟೋ ಕೇಸ್‌ನಲ್ಲಿ ಒಂದು ಧರಾ ತಲೆ ಕೆಟ್ಟು ಹೋಗ್ತಂತೆ ಅದೇನೋ One Child Syndrome ಅಂತಲಂತೆ ಆ ಕಾಯಿಲೆ ಹೆಸರು"

"ನೋಡೋ ಅಯ್ಯಂಗಾರಿ, ನಂಗೇನಾದ್ರೂ ಸಿಂಡ್ರೋಮ್ ಬರೋದಾದ್ರೆ ಅದೊಂದೇ ಒಂದು – One Wife Syndrome .... ಹ್ಹ ಹ್ಹ.... "ಜೋರಾಗಿ ನಗೋಕ್ ಶುರು ಮಾಡಿದ ರಹಮಾನ್.

ಎಲಾ ಇವನಾ ನಾವು ಅಷ್ಟೊಂದು ಸೀರಿಯಸ್ಸಾಗಿ ಮಾತಾಡ್ತಾ ಇದ್ರೂ ಎಲ್ಲವನ್ನೂ ತುಂಬಾ ಹಗುರವಾಗಿಯೇ ತೊಗೋತಾ ಇದಾನಲ್ಲ ಅಂತ ಕೋಪ ಬಂದ್ರೂ, ನಮಗೂ ಈಗ ನಗೂ ತಡೆಯೋಕ್ಕಾಗಲಿಲ್ಲ.

"ನಿಂ ಜನಗಳಲ್ಲೇನೋ ಪರವಾಯಿಲ್ಲ, ಶ್ರೀ ರಹಮಾನ್ ಒಂದ್ ವೇಳೆ ಆ ಸಿಂಡ್ರೋಮ್ ಬಂದರೂ ಇಲಾಜು ಬಲೇ ಸುಲಭ .. ಆದ್ರೆ, ನಮ್ಮಲ್ಲಿ" ಅಂದೆ ನಾನು–ವಿಷಾದದಿಂದಲೆ.

ಹೀಗೇ ಹೋಗ್ತಾ ಇದ್ರೆ ಸುಮ್ನೆ ಕಾಲ ಹೋಗತ್ತೆ ಹೊರತು ಮೂರು ಕಾಸಿನ ಕೆಲ್ಸಾ ಆಗೋಲ್ಲ ಅಂತ ಅನ್ನಿಸಿರಬೇಕು ಪಾಂಡೂಗೆ. ಸ್ವಲ್ಪ ಬೇಜಾರಾಗೇ ಕೇಳಿದ.

"ಅಯ್ತು ಬಿಡು........ನೀನೇ ನೇರವಾಗಿ ಹೇಳಿಬಿಡು ಯಾಕೆ ನಿನಗಿನ್ನಾ ಎರಡ್ನೇ ಮಗು ಆಗಿಲ್ಲ ? ಏನಾದರೂ ಆರೋಗ್ಯದ ತೊಂದರೇನಾ ? ಇಲ್ಲಾ, ಬೇಗಂ ಏನಾದರೂ ಬೇಡ ಅಂತಾರಾ ?"

"ಛೆ, ಛೆ, ಅಂತದ್ದೇನೂ ಇಲ್ಲ. ಈಗ ನೋಡ್ರೋ ನೀವೇ ಹೇಳಿ ಈಗಿನ್ ಕಾಲ್ದಲ್ಲಿ ಒಂದು ಮಗೂನ ಸರಿಯಾಗಿ ಸಾಕ್ಬೇಕೂ ಅಂತಂದ್ರೆ ಸುಮಾರು ಎಷ್ಟು ಬೇಕಾಗ್ಬಹುದೂಂತ. ಊಟ ತಿಂಡಿ, ಬಟ್ಟೆ ಬರೆ, ಓದು ಬರಾ ಅಂತೆಲ್ಲಾ ತಗೊಂಡ್ರೆ ಕಡೇ ಪಕ್ಷ ಐನೂರಾದ್ರೂ ಬೇಡ್ವಾ."

ಪಾಂಡು ಅನುಭವಸ್ಥನ ಥರಾ ಲೆಕ್ಕ, ಹಾಕಿ ಹೇಳಿದ;

"ಊ...ಐನೂರು ಅಂದ್ರೆ ಸ್ವಲ್ಪ ಜಾಸ್ತೀನೇ ಆಯಿತು. ನಾನೂರು, ನಾನೂರೈವತ್ತು ಸಾಕು ಅನ್ನಿಸಂತ್ತೆ"

"ಹೋಗಲಿ, ನಾನೂರೇ ಅಂತ ಇಟ್ಕೊ, ಆದರೆ ನನಗೆ ಈಗಿನ ಪರಿಸ್ಥಿತಿಲೀ ಅಷ್ಟು ಕೂಡಾ ಹೊಸಾ ಖರ್ಚು ನಿಭಾಯಿಸೋಕ್ ಆಗೊಲ್ಲ.

"ಅದೇನೋ ನೀನು ಹೇಳೋದು ? ಕೈ ತುಂಬ ಸಂಬಳ ಬರುತ್ತೆ. ಖರ್ಚೂ ಅಂತದ್ದೇನೂ ಕಾಣುಲ್ಲ. ಬೀಡಿ, ಸಿಗರೇಟು, ಇಸ್ಪೀಟು ಅಂತ ಯಾವ ಚಟಾನೂ ಇಲ್ಲ ಅಂತದ್ರಲ್ಲಿ ಒಂದು ನಾನೂರು ರೂಪಾಯಿ, ಅದೂ ಒಂದು ಮಗೂಗೆ, ಒಂದು ಪರ್ಮನೆಂಟ್ ಅಸೆಟ್‌ಗೆ, ಉಳಿಸೋಕ್ ಆಗ್ತಾ ಇಲ್ಲ ಅಂತೀ ಯಲ್ಲ. ಅದನ್ನ ನಾವು ನಂಬ್ ಬೇಕಾ ? ... ಅಯ್ಯಂಗಾರಿ ಉದ್ಗಾರ ತೆಗೆದ.

"ನಿಜವಾಗ್ಲೂ ಕಣಮ್ಮ. ಅದ್ ಯಾವ ಮಾಯದಲ್ಲಿ ಖರ್ಚಾಗುತ್ತೋ ತಿಂಗ್ಳ ಕೊನೇ ಹೊತ್ತಿಗೆ ಆದಾಯ ಖರ್ಚು ಸಮಾ ಅಂತ ಆಗಿರತ್ತೆ"

"ಲೋ ಸಾಹೇಬೂ ನೀನು ಲೆಕ್ಕದಲ್ಲಿ ಯಾವಾಗ್ಲೂ ವೀಕೇ. ತೆಗೋ ಈ ನ್ಯಾಪ್ಕಿನ್. ಒಂದ್ ಕಡೆ ಬರಕೋ ನಿನಗೆ ಎಷ್ಟು ಬರುತ್ತೇಂತ. ಹಾ ಕೈಗೆ ಬರೋದನ್ನೆ ಬರಕೋ... ಆಯ್ತಾ ? ಸರಿ, ಈ ಕಡೆ ಬರಕೊಂಡ್ ಬಾ ಊಟ. ತಿಂಡಿ, ಮನೆ ಬಾಡಿಗೇ, ಮಗನ ಖರ್ಚು ಇನ್ಷೂರೆನ್ಸ್, ಸೇವಿಂಗ್ಸ್ ಬ್ಯಾಂಕು ಅಂತ ಯಾವ ಯಾವ ಬಾಬ್ತಿಗೆ ಎಷ್ಟೆಷ್ಟು ಖರ್ಚಾಗುತ್ತೇ ಅಂತ"

"ಹೂ, ಆಯ್ತು," ಅಂದ ರಹಮಾನ್ ಸುಮಾರು ಹತ್ತು ನಿಮಿಷ ಆದ ಮೇಲೆ.

"ಸರಿ, ಈಗ ನೀನೇ ಹೇಳಪ್ಪಾ, ನಿಂಗೆ ಬರೋ ಸಂಬ್ಳಾ ಎಲ್ಲ ಪೂರ್ತಿ ಖರ್ಚಾಗುತ್ತೋ, ಇಲ್ಲ ಏನಾದರೂ ಕೊಂಚ ಉಳಿಯುತ್ತೋ ಅಂತ"

"ಆಶ್ಚರ್ಯ ಕಣ್ರೋ, ಈ ಲೆಕ್ಕದ ಪ್ರಕಾರ ಎಲ್ಲಾ ಖರ್ಚೂ ಹೊದ್ಮೇಲೂ ತಿಂಗಳಿಗೆ ಏನಿಲ್ಲಾ ಅಂದರೂ ಆರ್ನೂರಾದರೂ ಮಿಗತ್ತೆ. ಹಾಗೆ ನೋಡಿದ್ರೆ ಯಾವ ಬಾಬ್ತೂ ಮಿಸ್ಸಾದ್ಹಂಗೆ ಕಾಣುಲ್ಲ.... ಛೇ ಹೀಗೆಂತ ನನಗೆ ಮೊದಲೇ ಹೊಳೀಲಿಲ್ಲವಲ್ಲಾ",– ಅವನ ಧ್ವನೀಲಿ ಸಂತೋಷವೋ ವಿಷಾದವೋ ಯಾವುದೂ ಅಂತ ಗೊತ್ತಾಗಲಿಲ್ಲ.

"ಹಾ. ಅದೇನಪ್ಪಾ- ನಾನು ಹೇಳಿದ್ದು ನಿಂಗೆ ಲೆಕ್ಕಾ ಬರೋಲ್ಲ ಅಂತ....

ಈಗಿನ ತುಟ್ಟೀ ಕಾಲ್ದಲ್ಲೂ ಸಹ ಬರೇ ಆರುನೂರು ಸಂಬಳ ಬರೋರೇ ಧೈರ್ಯ ವಾಗಿ ಮದುವೇನೇ ಮಾಡ್ಕೊಂಡು ಸಂಸಾರ ನಡಸ್ತಾ ಇರ್ತಾರೆ. ಅಂತದ್ರಲ್ಲಿ ನಿನಗ್ಯಾಕಮ್ಮ ಹೆದರಿಕೆ ? .... ಆಯ್ತು, ಈಗ ಏನು ಹೇಳ್ತೀಯಾ"

ಅಯ್ಯಂಗಾರಿ ಮಾತನ್ನೇ ಗಮನಿಸಿದ ಹಾಗೆ ಕಾಣಿಸಲಿಲ್ಲ, ರಹಮಾನ್ ಮತ್ತೆ ಮತ್ತೆ ಲೆಕ್ಕಾಚಾರ ಹಾಕ್ತಾನೆ. ಏನೋ ಬರೀತಾನೆ. ಏನೋ ಹೊಡೆದು ಹಾಕ್ತಾನೆ. ನಾವೆಲ್ಲಾ ಅವನು ಏನು ಹೇಳಂತ್ತಾನೋ ಅನ್ನೋದನ್ನೆ ಕಾಯುತಾ ಇದ್ದೀವಿ.

ಅವನು ಮತ್ತೆ ಬಾಯಿ ಬಿಡಬೇಕಾದರೆ ಸುಮಾರು ಹತ್ತು ನಿಮಿಷವೇ ಆಯಿತು. ಸಂತೋಷಕ್ಕೇ ಅಂತ ಹೇಳಬಹುದಾದ ಒಂದು ಕಿರುನಗೆ ಈಗ ಅವನ ಮುಖದಲ್ಲಿ. ಆದರೆ ಈ ಸಾಹೇಬನ ವಿಷಯ ಹೇಳೋಕ್ಕೆ ಬರೋಲ್ಲ. ಅದು ಕುಚೇಷ್ಟೆಗೂ ಇರಬಹುದು.

"ಬಹಳ ಥ್ಯಾಂಕ್ಸ್ ಕಣಮ್ಮ, ಅಯ್ಯಂಗಾರಿ. ಇಷ್ಟೊಂದು ದುಡ್ಡು ಮಿಗ್ತಾ ಇದೇ ಅಂತ ಈಗಲೇ ಗೊತ್ತಾಗಿದ್ದು. ಆಗ್ಲಿ, ಈವತ್ತೇ ಬೇಗಂ ಜೊತೆ ಮಾತಾಡ್ತೀನಿ. ಅವಳೇನಾದ್ರೂ ಒಪ್ಕೊಂಡ್ರೆ ..."

"ಮುಂದಿನ್ ವರ್ಷ ಇಷ್ಟ್ ಹೊತ್ಗೆ ನಿಮ್ಮನೇಲಿ ಇನ್ನೊಂದು ಬೇಬಿ ಬಂದಿರುತ್ತೆ, ಅಲ್ವೇ ?" ಅಯ್ಯಂಗಾರಿ ಮಾತು ಕಂಪ್ಲೀಟ್ ಮಾಡಿದ. ಗೆದ್ದೇ ಅನ್ನೊ ಆತುರದಲ್ಲಿ.

"ಹ್ದೊ....ಬೇಬಿ ಯಾವನಿಗ್ ಬೇಕು ? ಇಷ್ಟೊಂದ್ ದುಡ್ ಮಿಗೋವಾಗ ಇನ್ನೊಬ್ಳು ಬೀಬೀನೆ ಯಾಕ್ ಬಂದಿರ್ಬಾರ್ದು ?.

ಮುಖಾಮುಖಿ-೯

—ಅಪ್ರಸ್ತುತ

ಅಪರಂಜಿ ಯುಗಾದಿ ಹಬ್ಬಕ್ಕೆ ಏನಾದರೂ ಅಣಿ ಮಾಡಿಕೊಳ್ಳಬೇಕೆಂದು ಗುಡಿಸಿಲಿನಿಂದ ಹೊರಟಕೂಡಲೇ ಕಾಗೆಯೊಂದು ಎಡದಿಂದ ಬಲಕ್ಕೆ ಹೋಯಿತು. ಶಕುನ ವೈಸವಾಯಿತೆಂದು ಹಿಗ್ಗುತ್ತಿದ್ದಹಾಗೇ. ಅದು ಬಲದಿಂದ ಎಡಕ್ಕೆ ಹೋಯಿತು. ಯಾಕೋ ಕಾಗೆ ಕಟ್ಟಿತು ಎಂದು ಅವಳು ನಿಂತಳು. ಕಾಗೆ ನೆಲದ ಮೇಲೆ ನಡೆಯುತ್ತ ಅವಳ ಎಡಕ್ಕೆ ಬಂದು ನಿಂತಿತು.

"ಯಾಕೆ ಹೀಗೆ ಮಾಡಿದೆ ಕಾಕರಾಜ ?" ಎಂದು ಕೇಳಿದಳು ಅಪರಂಜಿ.

"ಆ ಕಡೆಗೆ ಹಾರಿ ಹೋಗೋಣ ಅಂತ ಇದ್ದೆ, ಅಲ್ಲಿ ನೀಲಗಿರಿ ಮರ ಕಾಣಿಸಿತು. ಕುಳಿತುಕೊಳ್ಳಲು ಹೇಸಿಗೆಯಾಗಿ ಹಿಂದಿರುಗಿ ಬಂದೆ.

"ಕಾಕ ರಾಜ, ನಿನಗೆ ಯಾಕೆ ಇಂಥ ಅವೈಜ್ಞಾನಿಕ ನಂಬಿಕೆ ಬಂತು ?"

"ನಂಗೆ ಅದೆಲ್ಲಾ ಗೊತ್ತಿಲ್ಲ; ಕೃತಕ ಬಟ್ಟೆ ನೂಲು ಬಿಟ್ಟರೆ ಇನ್ನೇನೂ ಉಪಯೋಗವಿಲ್ಲ ಅದರಿಂದ. ಆರತಿ ಹೇಳಿದಾರಲ್ಲಾ, ಎಥಿಯೋಪಿಯದಲ್ಲಿ ಅದರಿಂದ ಕ್ಷಾಮ ಬಂತಂತೆ"

"ಹಾಗೆ ಹೇಳಲು ಸಾಕಷ್ಟು ಸಾಕ್ಷ್ಯಾಧಾರವಿಲ್ಲ ಅಂತ ಮಂತ್ರಿಗಳು ಹೇಳಿದರಂತಲ್ಲ ?"

"ಕೆಟ್ಟ ಮೇಲೆ ಬುದ್ಧಿ ಬಂದರೇನು ಬಿಟ್ಟರೇನು ? ಕಗ್ಗತ್ತಲೆ ಖಂಡವನ್ನು ಬಿಳಿಯರು ಬೆಳಕು ಮಾಡಿದ್ದರಿಂದಲೇ ಕ್ಷಾಮ ಏಕೆ ಬಂದಿರಬಾರದು ಎಂದು ಕೇಳಿದರೆ ಬಿಳಿಯರು ಏನು ಹೇಳತ್ತಾರೆ ? ಎಥಿಯೋಪಿಯಾ ಕ್ಷಾಮ ನೀಲಗಿರಿ ಮರದಿಂದ ಬಂದಿಲ್ಲ ಅನ್ನುವುದಕ್ಕೆ ಮಂತ್ರಿಗಳ ಬಳಿ ಇರುವ ಸಾಕ್ಷ್ಯಗಳಾದರೂ ಏನು ?"


"ಕಾಕರಾಜ, ನೀನು ತೀಕ್ಷ್ಣಮತಿ, ನನಗೆ ಅದೆಲ್ಲಾ ಗೊತ್ತಿಲ್ಲ"

"ಅಪರಂಜಿ. ಕೇಳಿಲ್ಲಿ, ನೀಲಗಿರಿ ಮರ ಕೆಟ್ಟದ್ದು ಅಂತ ಹೇಳಿದವರು, ಇದ್ದಕ್ಕಿದ್ದಹಾಗೆ ಅವರ ಪರ ಮಾತನಾಡುತ್ತಾರೆ. ಅಂಕಿ ಅಂಶಗಳು...

"ಕಾಕರಾಜ, ಅಂಕಿ ಅಂಶಗಳು ಏನನ್ನು ಹೇಳುವುದಿಲ್ಲ, ಈಗಿನ ಜನಕ್ಕೆ ಅದು ಗೊತ್ತಿದರೂ ಯಾಕೆ ಸುಮ್ಮನಿರುತ್ತಾರೆ ? ರೂಪಾಯಿ ಖರ್ಚಾದರೆ ರಸ್ತೆ ಸರಿಯಾಗುತ್ತದೆಯೋ ಹುಡುಗರಿಗೆ ಓದು ಬರಹ ನಡೆ ನುಡಿ ಬರುತ್ತದೆಯೋ, ಬೋರ್‌ವೆಲ್‌ಗಳಲ್ಲಿ ನೀರು ಸಿಗುತ್ತದೆಯೇ ? ಈ ಕಾಡಿನ ಸುತ್ತ ಮುತ್ತ ನೂರಾರು ಬೋರುಗಳಿವೆ. ಬತ್ತಿರುವುದು ಎಷ್ಟುಗೊತ್ತೇ ?"

"ಹಾಗಾದರೆ ಏನು ಮಾಡಬೇಕು ಅಪರಂಜಿ."

"ನೋಡು ನಮ್ಮ ಮುಖ್ಯಮಂತ್ರಿಗಳಲ್ಲಿ ಜನ ವಿಶ್ವಾಸ ಇಟ್ಟಿದ್ದಾರೆ. ನಾಳಿನಿಂದ ಇನ್ನೊಂದು ಚದರಡಿಯಲ್ಲೂ ನೀಲಗಿರಿ ನೆಡಬಾರದು ಅಂತ ಅವರು ಆರ್ಡರ್ ಮಾಡಿದರೆ, ನೆಲ ಹಾಳಾಗುವುದು ತಪ್ಪುತ್ತದೆ. ದೇಶಕ್ಕೆ ಒಳ್ಳೆಯದಾಗುತ್ತದೆ. ಈಗಿರುವ ಸಸಿಗಳನ್ನು ನೀಲಗಿರೀ ಮರ ಕಡಿತ ಮಾಡಿದ ಜಾಗದಲ್ಲೇ ನೆಡಬೇಕು ಅಂತ ಅವರು ಆದೇಶ ಕೊಟ್ಟರೆ, ಪೀಡೆ ತಪ್ಪುತ್ತದೆ."



''ತೆರಿಗೇ ಹಾಕಿ ಸರ್ಕಾರಾನೇ ದೋಚಿಕೊಂಡು ಹೋದ್ಮೇಲೆ ಡಕಾಯಿತರೇನ್ಮಾಡ್ತಾರೆ ಬಿಡೇ''

ಬೆಂಗಳೂರು-ಇಂದು

—ನಳಿನೀ ಪ್ರಿಯ

[ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನ ದಿನ ನಿತ್ಯದ ವಿದ್ಯಮಾನಗಳ ಬಗ್ಗೆ ರಾಜ ದ ಇತರ ಸ್ಥಳಗಳಲ್ಲಿರುವ ಅಪರಂಜಿ ಓದುಗರಿಗೆ ತಿಳಿಸುವ ಸದುದ್ದೇಶ(!) ದಿಂದ 'ನಳಿನೀಪ್ರಿಯ'ರವರು ಒಂದು ಕಾಲಂ ಬರೆಯುತ್ತೇನೆ ಅಂತ ಹಲವು ತಿಂಗಳು ಗಳಿಂದ ದುಂಬಾಲು ಬಿದ್ದಿದ್ದರು. ಕೊನೆಗೆ ಅವರ ಕಾಟ ತಡೆಯಲಾರದೆ, ಈ ಬಾರಿ ಅವರ ಬರಹವನ್ನು ಅಚ್ಚಿಸಿದ್ದೇವೆ.—ಸಂ.]

ಬೆಂಗಳೂರಿನಲ್ಲಿ ಮೊನ್ನೆ ಶ್ರೀಮದ್ಗಾಂಭೀರ್ಯದಿಂದ ಅತಿನಿಧಾನವಾಗಿ ನಡೆಯುವ ಸ್ಪರ್ಧೆ ಏರ್ಪಟ್ಟಿತ್ತು. ಇದೊಂದು ಟೀಂ ಇವೆಂಟ್ ಆಗಿದ್ದು, ಪ್ರಥಮ ಬಹುಮಾನ ಗೆದ್ದ ಕೀರ್ತಿ, ಕೆಂಚ, ಪಿ. ರಾಜ, ಪಳನಿಸ್ವಾಮಿ, ಬಿ. ಎಸ್. ವಾಸು ಈ ನಾಲ್ವರಿಗೆ ಸೇರಿತು. ಎಲ್ಲರೂ ಕೆ. ಇ. ಬಿ. ನೌಕರರು. ಅವರು ಗೆದ್ದ ವಿಧಾನವೂ ಕುತುಹಲಕಾರಿಯಾದದ್ದು. ಒಂದು ಕೈಗಾಡಿಯನ್ನು ತೆಗೆದುಕೊಂಡು ಅದರ ಮೇಲೆ ಒಂದೇ ಒಂದು ಹಗ್ಗವನ್ನು ಹಾಕಿ, ನಾಲ್ವರೂ ಒಟ್ಟಿಗೆ ಗಾಡಿಯನ್ನು ನಿಧನವಾಗಿ ನೂಕುತ್ತಾ ಗಂಭೀರವಾಗಿ ನಡೆದದ್ದು ಅವರ ಅನೇಕ ವರುಷಗಳ ಶ್ರದ್ಧಾಯುತ ಅಭ್ಯಾಸವನ್ನು ಸೂಚಿಸಿತ್ತು. ಅವರಿಗೆ ರನ್ನರ್ಸ್ ಅಫ್ ಆದ ಟೆಲಿಫೋನ್ ಇಲಾಖೆಯ ಮೂರು ನೌಕರರು ಒಂದೇ ಒಂದು ಟೆಲಿಫೋನ್ ಹಿಡಿದು ಮೂವರು ನಿಧಾನವಾಗಿ ನಡೆದ ದೃಶ್ಯ ನಯನ ಮನೋಹರವಾಗಿತ್ತು.

ಬೆಂಗಳೂರಿಗೆ ಹೊಸದಾಗಿ ಬಂದವರಿಗೆ ತಕ್ಷಣ ಕಣ್ಣಿಗೆ ಬೀಳುವುದು ಬೆಂಗಳೂರು ಸಲ್ಯೂಟ್, ಈ ಸಲ್ಯೂಟ್ ಮಾಡುವ ಬಗೆ ಹೀಗೆ. ನಿಮ್ಮ ಎಡಗೈಗೆ ಪಾರ್ಶ್ವವಾಯು ಬಡಿದಿದೆ ಎಂದಿಟ್ಟುಕೊಳ್ಳಿ. ಈಗ ನೀವು ಎಂದಿನಂತೆ ನಮಸ್ಕರಿಸಿ. ಬಲಗೈ ಎದೆಯಮೇಲೆ ಬಂದು, ಎಡಗೈಗೆ ಕಾಯುತ್ತಾ ನಿಲ್ಲುತ್ತದೆ. ಎಡಗೈ ಇದ್ದಲ್ಲೇ ಇರುತ್ತದೆ. ಇದೇ ಬೆಂಗಳೂರು ಸಲ್ಯೂಟ್ !. ಈ ಒಂದು ಕೈ ನಮಸ್ಕಾರದ ಉಗಮ ಕೆಂಪೇಗೌಡನ ಕಾಲದ್ದು. ದಂತಕಥೆಗಳ ಪ್ರಕಾರ, ಕೆಂಪೇಗೌಡನ ನೆಚ್ಚಿನ ಭಟನಾಗಿದ್ದ ತಿಮ್ಮ ನಾಯಕನು, ಭೀಕರ ಕಾಳಗವೊಂದನ್ನು ಗೆದ್ದು, ರಣರಂಗದಿಂದ ಹಿಂತಿರುಗಿ ತನ್ನ ಧಣಿಗೆ ನಮಸ್ಕರಿಸಿದನಂತೆ. ಕಾಳಗದಲ್ಲಿ, ಪಾಪ, ಆತನ ಎಡಗೈ ತುಂಡಾಗಿದ್ದು ನಮಸ್ಕಾರ ಒಂದು ಕೈಯಿಂದ ರೂಪುಗೊಂಡಿತು. ಇದೇ ಬೆಂ. ಸ. ದ ಉಗಮ ಎಂದು ಚರಿತ್ರಕಾರರು ಹೇಳುತ್ತಾರೆ.

ಹಲವು ದಿನಗಳ ಹಿಂದೆ, ಬೆಂಗಳೂರಿನ ಖ್ಯಾತ ಹವ್ಯಾಸೀ ನಾಟಕತಂಡ 'ರಂಗಸಂಪದ' ತನ್ನ ಹದಿನೈದರ ಸುಗ್ಗಿಯನ್ನು ಕಲಾಕ್ಷೇತ್ರದಲ್ಲಿ ನಡೆಸಿತು. ಅದರ ಪ್ರಯುಕ್ತ ಅವರು ಆಡಿದ ಮೂರು ನಾಟಕಗಳಲ್ಲಿ ಮೊದಲನೆಯದು "ಸನ್ನಿವೇಶ" ಕರ್ನಾಟಕದಲ್ಲಿ ವಿಚಾರವಾದಿ ಪತ್ರಕರ್ತನೊಬ್ಬನು, ಜಾರಿದ ಹೆಣ್ಣೊಂದರ ಕೈಹಿಡಿ ಯುತ್ತಾನೆ. ನಂತರ ಅವನು, ಗೊಮ್ಮಟನ ಮಸ್ತಕಾಭಿಷೇಕಕ್ಕಾಗಿ ಶ್ರವಣಬೆಳ ಗೊಳಕ್ಕೆ ಹೋಗುತ್ತಾನೆ. ಅವನು ಹಿಂದಿರುಗಿ ಬಂದಾಗ, ಅವನ ಹೆಂಡತಿ" ವಿಚಾರ ವಾದಿಯಾಗಿ, ಮಸ್ತಕಾಭಿಷೇಕಕ್ಕೆ ಹೋಗಿ ಮೂಢನಂಬಿಕೆಗೆ ಇಂಬುಗೊಡುತ್ತೀರ!" ಎಂದು ಛೀಮಾರಿಹಾಕುತ್ತಾಳೆ. ಅವನು ರೇಗಿ "ತೊಲಗಾಚೆ, ನಿನ್ನ ಯೋಗ್ಯತೆ ಇಷ್ಟೇ ಎಂದು ಮೊದಲೇ ತಿಳಿದಿರಬೇಕಾಗಿತ್ತು ಅನ್ನುವಷ್ಟರಲ್ಲಿ ಅವಳೇ "ನೀವು ಹೇಳುವ ಮೊದಲು ನಾನೇ ಹೋಗುತ್ತೇನೆ" ಎಂದು ಹೇಳಿ ಹೃದಯ ವಿದ್ರಾವಕ ವಾಗಿ ಚೀರಿ, ರಂಗಸ್ಥಳದಿಂದ ಧುಮಕಿ, ಪ್ರೇಕ್ಷಕರಕಡೆಗೆ (ಜಾರದೇ) ಓಡಿಬಂದು, ಹೊರಬಾಗಿಲನಿಂದ ಮಾಯವಾಗುತ್ತಾಳೆ. ನಾಟಕ ಚೆನ್ನಾಗಿದ್ದು ಮಸ್ತಕಾಭಿಷೇಕಕ್ಕೆ ಒಬ್ಬೊಬ್ಬರೇ ಹೋದರೆ ಆಗುವ ಅನಾಹುತಗಳನ್ನು ಪ್ರೇಕ್ಷಕರಿಗೆ ಮನದಟ್ಟು ಮಾಡಿ ಕೊಡುವುದರಲ್ಲಿ ಯಶಸ್ವಿಯಾಯಿತು.

ಮಲ್ಲೇಶ್ವರದಲ್ಲಿನ ನೀರಿನ ಬವಣೆ ಹೇಳತೀರದು. ದಿನ ಬಿಟ್ಟು ದಿನ ನೀರು ಬರುತ್ತೆ ಎಂದು ಜಲಮಂಡಳಿಯವರು ಹೇಳಿದ್ದರೂ, ನೀರು ಬರುವುದು ಮಾತ್ರ ಯದ್ವಾತದ್ವಾ. ಆಚೆ ಬೀದಿ ಪಂಕಜಮ್ಮನವರು ಇಂದು ಬೆಳಿಗ್ಗೆ ಈ ಬಗ್ಗೆ ನಮ್ಮಾಕೆಯೊಂದಿಗೆ ಪೇಚಾಡಿಕೊಳ್ಳುತ್ತಿದ್ದರು. ಅವರು ಹೋದಮೇಲೆ "ಏನಂತೆ?" ಎಂದು ನಮ್ಮಾಕೆಯನ್ನು ಕೇಳಿದೆ–ಅವಳು ಹೇಳಿದ್ದು.

"ಅವರ ಮನೆಯಲ್ಲಿ ಮೊನ್ನೆ ರಾತ್ರೆ, ಎರಡು ಘಂಟೆಗೆ ನೀರು ಬಂದಿತ್ತಂತೆ. ಸರಿ ನೆನ್ನೆ ಬರುಲ್ಲಾ ಅಂತ, ಇದ್ದ ಎರಡು ಪ್ಲಾಸ್ಟಿಕ್ ಬಕೆಟ್‌ಗಳನ್ನು ರಿಪೇರಿಗೆ ಕೊಟ್ಟಿದರು. ನಿನ್ನೆ ಸಂಜೆ ಸೆಕೆಂಡ್ ಷೋ ಸಿನಮಾದಿಂದ ದಂಪತಿಗಳು ಮನೆಗೆ ಬರುವಷ್ಟರಲ್ಲಿ, ಅಡಿಗೆ ಮನೆಯೆಲ್ಲಾ ನೀರೋ ನೀರು. ಇವರು ಒಳಗೆ ಬರುವ ಹೊತ್ತಿಗೆ ನೀರು ಆಗತಾನೇ ನಿಂತಿದ್ದು ತೊಟ್ಟಿಕ್ಕುತ್ತಿತ್ತಂತೆ. ನೆಲವೆಲ್ಲಾ ಕೊಚ್ಚೆ ಕುಡಿಯಲು ಮಾತ್ರ ನೀರಿಲ್ಲ. ತುಂಬಾ ಪೇಚಾಡಿಕೊಂಡರು"

'ಎಲ್ಲಿ ನೋಡಿದರಲ್ಲಿ ನೀರು !, ಎಲ್ಲಿ ನೋಡಿದರಲ್ಲಿ ನೀರು !
ಕುಡಿಯಲೆಂಬೆನೇ ಇಲ್ಲವಾಯಿತೇ ಲೋಟ ಮಾತ್ರ, ಗುಟುಕು ನೀರು!'

ಎಂದು ಬರೆದ ಆಂಗ್ಲ ಕವಿ, ಪಂಕಜಮ್ಮನವರನ್ನು ನೋಡಿ ಬರೆದನೆಂಬುದಕ್ಕೆ ಯಾವ ಆಧಾರವೂ ಇಲ್ಲ ಎಂದು ತಿಳಿದು ಬಂದಿದೆ.

ಬೆಂಗಳೂರಿನ ಮಿಕ್ಕ ಆಗು ಹೋಗುಗಳು ಮುಂದಿನ ಸಂಚಿಕೆಯಲ್ಲಿ ○

ಜನಪ್ರಿಯ ವಿಜ್ಞಾನ-ಗುರುತ್ವಾಕರ್ಷಣೆ

—ಶಿವು

ಬಾಹ್ಯಾಕಾಶ, ಕಾಲಗಳ ಬಗ್ಗೆ ಈ ಹಿಂದೆ ತಿಳಿದಿದ್ದಾಯಿತು. ಈಗ ಸಕಲ ವಿಶ್ವವನ್ನು ತನ್ನ ನಿಯಮದಲ್ಲಿ ಬಂಧಿಸಿರುವ ಗುರುತ್ವಾಕರ್ಷಣೆಯ ಬಗ್ಗೆ ತಿಳಿಯುವುದು ಉಚಿತ. ಈ ಜಟಿಲವಾದ ವೈಜ್ಞಾನಿಕ ವಿಷಯವನ್ನು ಪರಿಶೀಲಿಸಲು ಯತ್ನಿಸೋಣ.

ಗುರುತ್ವಾಕರ್ಷಣೆ ಎಂದರೇನು ?

ಈ ಪ್ರಶ್ನೆಯನ್ನು ನಮ್ಮ ಮುಂದಿನ ಬೀದಿ ನಾರಣಯ್ಯಂಗಾರರನ್ನು ಕೇಳಿದಾಗ "ಗುರುತ್ವಾಕರ್ಷಣೆ ಗೊತ್ತಿಲ್ಲವೇನೋ ಪೆದ್ದು ಮುಂಡೇದೇ. ಗುರುತ್ವ ಎಂದರೆ ಗುರುವಿನ ಗುಣಗಳನ್ನು ಹೊಂದಿರುವವನು ಆಕರ್ಷಿಸುವುದೇ ಗುರುತ್ವಾಕರ್ಷಣೆ. ಉದಾಹರಣೆಗೆ-ರಾಜನೀಶ್, ಮಹರ್ಷಿ ಮಹೇಶ್ ಯೋಗಿ ಇತ್ಯಾದಿ" ಎಂದುಹೇಳಿ ನನ್ನ ಬಾಯಿ ಮುಚ್ಚಿಸಿದರು. ನನಗೆ ಯಾಕೋ ಅವರು ಹೇಳಿದ್ದು ಸರಿಯೆನಿಸಲಿಲ್ಲ. ಸೆಕೆಂಡ್ ಒಪಿನಿಯನ್ ಇರಲಿ ಅಂತ ಹಿಂದಿನ ಬೀದಿ ರಾಜಣ್ಣನ್ನ ಕೇಳಿದೆ. ರಾಜಣ್ಣ ಮಹಾರಸಿಕ. "ಗುರುತ್ವ ಎಂದರೆ ದೊಡ್ಡದಾದ, ಆಕರ್ಷಣೆ ಎಂದರೆ ಎಂದರೆ ಆಕರ್ಷಿಸುವಿಕೆ—ವಸ್ತುವಿನ ಗಾತ್ರ ದೊಡ್ಡದಾದಷ್ಟು ಆಕರ್ಷಣೆ ಜಾಸ್ತಿ. ಉದಾಹರಣೆಗೆ-ಮ್ಯಾರಿಲೆನ್‌ಮನ್ರೊ, ಸಿಲ್ಕ್‌ಸ್ಮಿತಾ ಇತ್ಯಾದಿ" ಎಂದು ಹೇಳಿ ಒಂದು ಥರಾ ನಕ್ಕು ಹೊರಟುಹೋದ.

ಗುರುತ್ವಾಕರ್ಷಣೆಯ ಮುಖ್ಯ ನಿಯಮ :-

"ಮೇಲೆ ಹೋದದ್ದೆಲ್ಲಾ ಕೆಳಗೆ ಬರಲೇಬೇಕು" ಎಂಬುದು ಗುರುತ್ವಾಕರ್ಷಣೆಯ ಮುಖ್ಯನಿಯಮ. ಅಂಟುಲೆ, ಪ್ರಣಾಭ್ ಮುಖರ್ಜಿ ಇವರುಗಳು ಈ ನಿಯಮವನ್ನು ಪಾಲಿಸಿ ಅದರ ಸತ್ಯವನ್ನು ದೃಷ್ಟಾಂತಗೊಳಿಸಿದರು.

ಗುರುತ್ವಾಕರ್ಷಣೆಯ ಚರಿತ್ರೆ :-

ಗುರುತ್ವಾಕರ್ಷಣೆ, ಕ್ರಿ. ಶ. 1665 ರಲ್ಲಿ ನ್ಯೂಟನ್ನನಿಂದ ಕಂಡುಹಿಡಿಯಲ್ಪಟ್ಟಿತು. ದಂತಕಥೆಗಳ ಪ್ರಕಾರ, ನ್ಯೂಟನ್ ತೋಟ ಒಂದರಲ್ಲಿ, ಸೇಬಿನ

ಮರದಡಿಯಲ್ಲಿ ಕುಳಿತ್ತಿದ್ದಾಗ, ಸೇಬೊಂದು ಮರದಿಂದ ಕಿತ್ತು, ಅವನ ತಲೆಯ ಮೇಲೆ ಬಿತ್ತಂತೆ. ಆ ಕ್ಷಣದಲ್ಲಿ ಗುರುತ್ವಾಕರ್ಷಣೆಯ ನಿಯಮ ನ್ಯೂಟನ್ನನ ಮನ ದಲ್ಲಿ ರೂಪಗೊಂಡಿತಂತೆ. ಈ ಬಗ್ಗೆ ಬರೆಯುವ ಮೊದಲು, ಇದರ ಸಾಧ್ಯತೆಯ ಬಗ್ಗೆ ನಮ್ಮ ಪೈ ಡಾಕ್ಟರಲ್ಲಿ ಕೇಳಿದೆ. ಅವರ ಪ್ರಕಾರ, ಸೇಬಿನ ಮರ ಸುಮಾರು 15 ಅಡಿ ಎತ್ತರವಿದ್ದು, ಸೇಬಿನ ತೂಕ 200 ಗ್ರಾಂ ಇದ್ದರೆ, ಆ ಎತ್ತರದಿಂದ ಆ ತೂಕ ನೇರವಾಗಿ ತಲೆಯ ಮೇಲೆ ಬಿದ್ದರೆ, ಕನ್‌ಕರ್ಷ ಆಗಿ ಏನೇನೋ ಬಡಬಡಿ ಸುವ ಹಾಗಾಗುತ್ತೆ ಎಂದರು. ಇದು ಹೇಗಾದರೂ ಇರಲಿ, ನಿಯಮ ರೂಪು ಗೊಂಡಿದ್ದಂತೂ ನಿಜ.

ಐನ್‌ಸ್ಟೀನ್ ಮತ್ತು ಗುರುತ್ವಾಕರ್ಷಣೆ :–

ಕ್ರಿ. ಶ. 1665 ರಲ್ಲಿ ರೂಪಿತಗೊಂಡ ನಿಯಮ 1914 ರವರೆಗೂ ಯಾವ ಚ್ಯುತಿಯೂ ಇಲ್ಲದೇ ಪ್ರಚಲಿತವಾಗಿತ್ತು. 1914 ರಲ್ಲಿ ಐನ್‌ಸ್ಟೀನ್ "Curved Space causes gravity" ಎಂಬ ಹೊಸ ಸಿದ್ಧಾಂತವನ್ನು ಮುಂಡಿಸಿದ. ಈ ಸಿದ್ಧಾಂತವನ್ನು ಕನ್ನಡಕ್ಕೆ ಭಾಷಾಂತರಿಸುವುದು ಸ್ವಲ್ಪ ತಲೆನೋವಿನ ಕೆಲಸ. Curved Space ಅಂದರೆ ವಕ್ರವಾಗಿರುವ ಜಾಗ ಅಂತ ಮೊದಲು ಕನ್ನಡಿಸಿದೆ. ಅದೇಕೋ ಸರಿಬರಲಿಲ್ಲ. Curve ಎಂಬುದಕ್ಕೆ ವಕ್ರತೆ ಎಂದಾದರೆ, Gracious Curves ಎಂಬುದಕ್ಕೆ ಮನೋಹರವಾದ ವಕ್ರತೆ (!) ಎನ್ನಲಾಗುತ್ತದೆಯೋ ? ಖಂಡಿತಾ ಇಲ್ಲ. ಅದರ ಬದಲು Curve ಎಂಬುದಕ್ಕೆ ಉಬ್ಬು ತಗ್ಗುಗಳು ಎಂಬ ಅರ್ಥ ತೆಗೆದುಕೊಂಡರೆ ಐನ್‌ಸ್ಟೀನ್ ಸಿದ್ಧಾಂತದ ಕನ್ನಡ ಅನುವಾದ

"ಜಾಗದ ಉಬ್ಬು ತಗ್ಗುಗಳು ಆಕರ್ಷಣೆಯನ್ನು ಹೆಚ್ಚಿಸುತ್ತದೆ" ಈ ಘನವಾದ ನಿಯಮವನ್ನು ಉಪಯೋಗಿಸಿಕೊಂಡು ನಮ್ಮ ತಮಿಳು ಚಿತ್ರ ನಿರ್ಮಾ ಪಕರನೇಕರು ಹೇರಳವಾಗಿ ಹಣಗಳಿಸಿರುವುದು ಈ ನಿಯಮದ ನಿತ್ಯತೆಗೆ ಸಾಕ್ಷಿ.

ಗುರುತ್ವಾಕರ್ಷಣೆಯ ಉಪಯೋಗಗಳು :–

ನನ್ನ ಮಟ್ಟಿಗೆ ಹೇಳುವುದಾದರೆ, ನನಗಾಗಬಹುದಾಗಿದ್ದ ದೊಡ್ಡ ಅನಾಹುತ ವೊಂದನ್ನು ಗುರುತ್ವಾಕರ್ಷಣೆ ತಪ್ಪಿಸಿತು. ಮೊನ್ನೆ ನಾನು ನನ್ನ ಹೆಂಡತಿ ಮಾತಾ ಡುತ್ತಾ ಕುಳಿತಿದ್ದಾಗ, ಎಂದಿನಂತೆ ಮಾತು ಪ್ರಕೋಪಕ್ಕೆ ಹೋಗಿ ನಂತರ ಜಗಳಕ್ಕೆ ತಿರುಗಿತು. ಜಗಳದ ಕಾವು ಏರುತ್ತಲೇ, ನನ್ನ ಅರ್ಧಾಂಗಿ ಕುರ್ಚಿಯಿಂದ ಎದ್ದು Ash Tray ತೆಗೆದು ನನ್ನ ತಲೆಗೆ ಬೀಸುವುದರಲ್ಲಿದ್ದಳು. ಆಕೆಯ ತೂಕ ಕೇವಲ

80 ಕೇಜಿ. ಗುರುತ್ವಾಕರ್ಷಣೆಯ ದಯೆ. ನಿಧಾನವಾಗಿ ಏಳುವಷ್ಟರಲ್ಲಿ ನಾನು ಓಡಿಹೋಗಿ ಅನಾಹುತ ತಪ್ಪಿಸಿಕೊಂಡೆ. ಗ್ರಾವಿಟಿ ಇಲ್ಲದಿದ್ದರೆ ಆಕೆ ಹಕ್ಕಿಯಂತೆ ಹಾರಿ ಕ್ಷಣಾರ್ಧದಲ್ಲಿ ನನ್ನನ್ನು ಟಾರ್ಜೆಟ್ ಪ್ರಾಕ್ಟೀಸ್‌ಗೆ ಉಪಯೋಗಿಸುತ್ತಿದ್ದಳು. ಆ ಪರಿಸ್ಥಿತಿಯ ಗ್ರಾವಿಟಿಯನ್ನು ಯೋಚಿಸಲೂ ಭಯವಾಗುತ್ತದೆ.

ನಮ್ಮ ಕ್ರಿಕೆಟಿಗರು ಆಸ್ಟ್ರೇಲಿಯಾದಲ್ಲಿ ಆಡುತ್ತಿದ್ದಾಗ ಶ್ರೀಕಾಂತ್ 20 ರನ್‌ಗಳಾದ ನಂತರ, ಯಥಾ ಪ್ರಕಾರ ಬೀಸಿ ಕ್ಯಾಚ್ ಕೊಟ್ಟಾಗ, ಗುರುತ್ವಾಕರ್ಷಣೆ, ಭಾರತದ ಭಾಗ್ಯತಾರೆಯಂತೆ ಬಂದು ಚೆಂಡು ನೆಲತಾಗುವಂತೆ ಮಾಡಿದ್ದು ನೆನಪಿನಲ್ಲಿ ಹಸಿರಾಗಿದೆ.

ಮುಕ್ತಾಯ :–

ಜಂಬೂ ದ್ವೀಪದ ನಡುವಿನ ಈ ಭರತ ಖಂಡದ ಕೀರ್ತಿ ಪತಾಕೆ ಎಲ್ಲೆಲ್ಲೂ ಹಾರಾಡಿದ್ದು, ನಮ್ಮ ಬಾಹ್ಯಾಕಾಶ ಯಾನದಿಂದ. ರಾಕೇಶ್ ಖನ್ನ "ಸಾರೇ ಜಹಾಂಸೆ ಅಚ್ಚ, ಹಿಂದೂಸ್ಥಾನ್ ಹಮಾರ" ಎಂದು ನಮ್ಮ ನಾಡಿನ ಗುಣಗಾನವನ್ನು ಸಕಲ ಜಗತ್ತಿಗೂ ಕೇಳುವಂತೆ ಘೋಷಿಸಿದ್ದು. ಗುರುತ್ವಾಕರ್ಷಣೆಯನ್ನು ಗೆದ್ದು ರಾಕೆಟ್ ಯಾನ ಮಾಡಿದನಂತರ. ಗುರುತ್ವಾಕರ್ಷಣೆಯೇ ಇಲ್ಲದಿದ್ದರೆ ಈ ಗಗನ ಯಾತ್ರೆಯನ್ನು ಸಾಹಸವೆಂದು ಪರಿಗಣಿಸಲಾಗುತ್ತಿರಲಿಲ್ಲ ಅಲ್ಲವೇ !

ಅವಲಕ್ಕಿ

—ಡುಂಡಿರಾಜ್

ಗೆಳೆಯನ ನೋಡಲು
ಹೋದ ಸುದಾಮ
ಕೊಟ್ಟನು ಹಿಡಿ ಅವಲಕ್ಕಿ
ಸಿಕ್ಕಿತು ಬದಲಿಗೆ
ಅಷ್ಟೈಶ್ವರ್ಯ
ನಿಜವಾಗಿಯೂ ಅವ "ಲಕ್ಕಿ"

ಗೀತಾ ವಾಕ್ಯಗಳು

—ಲೀಲಾಮಿರ್ಜೆ

ಅಪರಂಜಿಯ ಯುಗಾದಿ ವಿಶೇಷಾಂಕಕ್ಕೆ ಅಂತ ಒಂದು ಲೇಖನ ಬರೆದೆ. ನಮ್ಮವರಿಗೆ ಅದನ್ನ ಕೊಟ್ಟು 'ಹೇಗಿದೆ ಅಂತ ಓದಿ ಹೇಳಿ' ಎಂದೆ. ಸೀರಿಯಸ್ಸಾಗಿ ಹುಬ್ಬು ಗಂಟು ಹಾಕಿಕೊಂಡ್ ಓದಿದ ಮೇಲೆ, ಚೆನ್ನಾಗಿದೆ, ತುಂಬ ಗಂಭೀರವಾಗಿದೆ, ಇನ್ನೊಂದು ಸ್ವಲ್ಪ effort ಹಾಕಿದಿದ್ದರೆ ಕಣ್ಣಲ್ಲಿ ನೀರು ತಂದಿರೋದು' ಎಂದ್ರು.

'ಅಯ್ಯೋ, ಇದೇನ್ ಹೀಗ್ ಅಂತೀರ. ಇದು ಹಾಸ್ಯ ಲೇಖನ' ಅಂದೆ "ಹೌದಾ, ಹಾಗಾದ್ರೆ ಮೇಲೆ 'ಹಾಸ್ಯ ಲೇಖನ' ಅಂತ ಬರಿ, ಇಲ್ಲದಿದ್ರೆ ಸಂಪಾದಕರಿಗೆ ತಾನೆ ಹ್ಯಾಗ್ ಗೊತ್ತಾಗ್ ಬೇಕು'' ಅಂದ್ರು. ಇವರ ಮಾತ್ ಕೇಳಿ ನಂಗೆ ಬಲು ಸಂಕಟವಾಯ್ತು.

ಸಡನ್ನಾಗಿ ಒಂದ್ ಐಡಿಯಾ ಹೊಳೀತು. ನನ್ನ ನಗೆ ಲೇಖನಕ್ಕೆ ಈ ತರಹ ದುರಂತದ ಕಳೆ ಇರೋದ್ರಿಂದ, ನಾನು ಗಂಭೀರವಾಗಿ ಏನಾದ್ರೂ ಬರದ್ರೆ ಆಗ ಅದರಲ್ಲಿ ತಿಳಿನಗೆ ಕಾಣಬಹುದೇನೊ ಅನ್ನಿಸ್ತು. ಅದಕ್ಕೆ ಭಗವದ್ಗೀತೆಯ ವಿಷಯವಾಗಿ ಬರೆಯೋಣ ಅಂದುಕೊಂಡೆ.

ಆರ್ ತಿಂಗಳ ಹಿಂದೆ ಸ್ವಾಮೀಜೀಗಳೊಬ್ಬರು ಗೀತೆಯ ಬಗ್ಗೆ ಮಾತಾಡಿದ್ರು. ಎರಡು ಪುಟ್ಟ ಹಕ್ಕಿಗಳು ಒಂದು ಚಿಕ್ಕ ಗೂಡುಕಟ್ಟುವಷ್ಟು ದೊಡ್ಡ ಗಡ್ಡ ಆತನಿಗೆ. ಈ ಇಂಪೋರ್‌ಟೆಡ್ ಸ್ವಾಮಿಗಳಿಗೆ ಇರಬೇಕಾದ ಲಕ್ಷಣಗಳೆಲ್ಲವೂ ಆತನಲ್ಲಿ ತಾಂಡವಾಡುತ್ತಿದ್ದವು.

ಗೀತೆಯ ಕೆಲವು ಶ್ಲೋಕಗಳಿಗೆ ಅವರು ಕೊಟ್ಟ ಅರ್ಥ, ಹಾಗೂ ಅವರೇ ಕೊಟ್ಟ ವಿವರಣೆಗಳು ಹೀಗಿವೆ– (ಇಂಗ್ಲೀಷ್ ಭಾಷಣದ ಕನ್ನಡ ಅನುವಾದ)

''ಉದ್ಧರೇತ್ ಆತ್ಮನಾ ತ್ಮಾನಂ ನ ಆತ್ಮಾನಂ ಅವಸಾದಯೇತ್ ''

ಅಂದರೆ ನಮ್ಮನ್ನು ನಾವು ಉದ್ಧಾರ ಮಾಡಿಕೊಳ್ಳಬೇಕು. ನಮ್ಮ ಕೈ ನಾವೇ ಬಿಡಬಾರದು.

ಇದು ಗೀತೆಯ ಮೂಲ ಮಂತ್ರವೆಂದರೂ ತಪ್ಪಾಗಲಾರದು. ಇಲ್ಲಿ ಇದರ ಗೂಢಾರ್ಥ ಮುಖ್ಯ ಎಂದೂ ಕಾಣದ ಆತ್ಮವನ್ನು ಅರ್ಥಮಾಡಿಕೊಳ್ಳಲು ಜೀವ ಪರ್ಯಂತ ಹೆಣಗಬಾರದು. 'ಆತ್ಮ ಎಂದರೆ 'ನಾನು' 'ನನ್ನ' ಉದ್ಧಾರ ವನ್ನು ನಾನು ಮಾಡಿಕೊಳ್ಳಬೇಕು. ನನ್ನ ಮನೆಯನ್ನು ನಾನು ಕಟ್ಟಿಕೊಳ್ಳಬೇಕೇ ವಿನಹ ಬೇರೆ ಯಾರೂ ನನಗೆ ಅದನ್ನು ಕಟ್ಟಿಕೊಡುವುದಿಲ್ಲ.

ಸಮಯ ಅನುಕೂಲವಾಗಿದ್ದಾಗ, ಸಿಕ್ಕಿದ್ದನ್ನು ಬಿಡದೆ, ಏಕಾಗ್ರಚಿತ್ತದಿಂದ ದೋಚಿಕೊಂಡರೆ ಮಾತ್ರ ಆತ್ಮೋದ್ಧಾರ ಸಾಧ್ಯ, ಈ ಲೌಕಿಕ ದೃಷ್ಟಿಯನ್ನು ಮರೆಯಬಾರದು.

ಮತ್ತೊಂದು ಶ್ಲೋಕವನ್ನು ತೆಗೆದುಕೊಳ್ಳಿ.

"ಸಮಃ ಶತ್ರೌಚ ಮಿತ್ರೇ ಚ ತಥಾ ಮಾನಾವಮಾನಯೊಮಾಃ "

ಅಂದರೆ ಮುಕ್ತಿ ಮಾರ್ಗದಲ್ಲಿ ಇರುವವನಿಗೆ ಶೀತ-ಉಷ್ಣ. ಶತ್ರು-ಮಿತ್ರ ಇತ್ಯಾದಿ ಎಲ್ಲವೂ ಸಮ.

ಅರ್ಥ ತೀರ ಸರಳ, ಆತ್ಮೋದ್ಧಾರವಾಗಬೇಕಾದರೆ ಕರಿಹಣ - ಬಿಳಿಹಣ, ನ್ಯಾಯ - ಭ್ರಷ್ಟಾಚಾರ, ಹಿಂಸೆ - ಅಹಿಂಸೆ, ಮುಂತಾದವುಗಳ ಭೇದವನ್ನು ಮರೆಯ ಬೇಕು. ಎಲ್ಲವೂ ಒಂದೇ ಎನ್ನುವುದು ಕರಗತವಾದರೆ ಉದ್ಧಾರ ಖಂಡಿತ.

"ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಂ! ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೆ"

ಮನಸ್ಸನ್ನು ಹತೋಟಿಯಲ್ಲಿ ಇಡುವುದು ಸುಲಭವಲ್ಲ ಇದನ್ನು ಸಾಧಿಸಲು ಅಭ್ಯಾಸ ಮುಖ್ಯ.

Practice makes perfect ಎನ್ನುವುದೇ ಇದರ ರಹಸ್ಯಾರ್ಥ. ಮುಂದಿನ ಪ್ರಶ್ನೆ ಏನನ್ನು ಅಭ್ಯಾಸ ಮಾಡಬೇಕು ಎನ್ನುವುದು. ಬಾಳಲು ಶ್ರೇಷ್ಠ ವಾದ ನವನೀತ ಸೇವೆ, ಗೆದ್ದೆತ್ತಿನ ಬಾಲ ಹಿಡಿಯುವುದು, ಲಕ್ಷ್ಮಿಯನ್ನು ಮೇಜಿನ ಕೆಳಗೆ ಓಡಾಡಿಸುವ ಕಲೆ ಇಂತಾದುವುಗಳನ್ನು ಅಭ್ಯಾಸಿಸಬೇಕು. ಆಗ ಈ ಜನ್ಮದಲ್ಲೇ ಸಿದ್ಧಿ ದೊರಕುವುದರಲ್ಲಿ ಸಂಶಯವಿಲ್ಲ.

"ವಾಸಾಂಸಿ ಜೀರ್ಣಾನಿ ಯಥಾ ವಿಹಾಯ. ನವಾನಿ ಗೃಹ್ಣಾತಿ ನರೋಪ ರಾಣಿ..."

ಜನಪ್ರಿಯವಾಗಿರುವ ಈ ಶ್ಲೋಕದ ಅರ್ಥ ಹೀಗಿದೆ. ಆತ್ಮ ಜೀರ್ಣವಾದ ದೇಹವನ್ನು ಕಿತ್ತೆಸೆದು, ಹೊಸದನ್ನು ಸೇರುತ್ತದೆ. ಬಟ್ಟೆಯನ್ನು ಬದಲಾಯಿಸಿದ ಹಾಗೆ.

ಶ್ಲೋಕ ಸರಳವಾಗಿದ್ದರೂ, ಗಹನವಾದ ಫಾರ್ಮ್ಯೂಲಾ ಇದರೊಳಗೆ ಅಡಗಿದೆ. ಇಂಗ್ಲಿಷಿನಲ್ಲಿ "ಡ್ರಾಪ್ ದೆಮ್ ಲೈಕ್ ಹಾಟ್ ಬ್ರಿಕ್ಸ್ ಎನ್ನುವುದು ಇಲ್ಲಿ ಅನ್ವಯಿಸುತ್ತದೆ. ಕೆಲಸವಾಗುವ ತನಕ ಹಲ್ಲುಕಿರಿದರೆ ಸಾಕು. ನಂತರ ಉಪಕಾರ ಮಾಡಿದವರ ಗೊಡವೆ ನಮಗೆ ಬೇಡ !

ಮತ್ತೊಂದು ಶ್ಲೋಕ ತೆಗೆದುಕೊಳ್ಳಿ. ಇದು ನನ್ನ ಮೆಚ್ಚಿನ ಶ್ಲೋಕ,

"ಯಾ ನಿಶಾ ಸರ್ವ ಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ........

ಸರ್ವರಿಗೂ ಕತ್ತಲೆಯಾದಾಗ, ಜ್ಞಾನಿಗೆ ಎಚ್ಚರವಾಗಿರುತ್ತದೆ, ಬೆಳಕು ಕಾಣುತ್ತದೆ....


"ಅಂದರೆ, ಕತ್ತಲಲ್ಲಿ ಅವನಿಗೆ ಕಣ್ಣು ಕಾಣುತ್ತದೆಯೇ, ಅವನು ಗೂಬೆಯೇ. ಆತನಿಗೆ ನಿದ್ದೆ ಬರದೇ, ಎಂದೆಲ್ಲಾ ಜನ ನನ್ನನ್ನು ಕೇಳುತ್ತಾರೆ. ಅದು ಹಾಗಲ್ಲ. ಜ್ಞಾನಿ ಗೂಬೆಯಲ್ಲ, ಆದರೆ ವಿವೇಕಕ್ಕೆ ಗೂಬೆ ಹೇಗೆ ಹೆಸರುವಾಸಿಯಾಗಿದೆಯೊ ಹಾಗೆ ಜ್ಞಾನಿಯೂ ವಿವೇಕಿ ಕತ್ತಲಾದಾಗ ನಮಗೆ ಏನೂ ಕಾಣುವುದಿಲ್ಲ. ಅವಿವೇಕಿಗಳಾದ ನಮಗೆ ಹಗಲೂ ಏನೂ ಕಾಣದು ಎಂದರೂ ತಪ್ಪಾಗಲಾರದು. ನಮಗೆ ಕಾಣದ್ದು ಜ್ಞಾನಿಗೆ ಕಾಣುತ್ತದೆ. ಉದಾಹರಿಸಿ ಹೇಳುತ್ತೇನೆ, ಅರ್ಥಮಾಡಿಕೊಳ್ಳಿ.

ಒಂದು ಸಣ್ಣ ವಿಷಯ ತೆಗೆದುಕೊಳ್ಳಿ. ಶಾಲೆಗೆ ಮಗುವನ್ನು ಸೇರಿಸಲು ಹೋಗುತ್ತೀರ. ಸಿನಿಮಾದಲ್ಲಿ ಹೌಸ್‌ಫುಲ್ ಬೋರ್ಡ್ ಹಾಕಿದ ಹಾಗೆ, ಮೊದಲನೆಯ ದಿನವೇ ಶಾಲೆಯ ಬಾಗಿಲ ಮೇಲೆ 'ಸೀಟುಗಳು ತುಂಬಿವೆ' ಎಂದು ಹಾಕಿಬಿಟ್ಟಿರುತ್ತಾರೆ. ಪೆಚ್ಚು ಮುಖ ಹಾಕಿಕೊಂಡು ಮನೆಗೆ' ಹಿಂತಿರುಗುತ್ತೀರ. ಅಜ್ಞಾನಿಗಳಾದ ನಿಮಗೆ ಬೋರ್ಡ್ ಬಿಟ್ಟು ಇನ್ನೇನೂ ಕಾಣದು. ಆದರೆ ಜ್ಞಾನಿಯಾದವನು ಅಂತಹ ಬೋರ್ಡನ್ನು ನೋಡಿದರೆ ಹಿಂತಿರುಗುವ ಬದಲು, ಹಿಂಬಾಗಿಲಿಗೆ ಹೋಗುತ್ತಾನೆ. ತನ್ನ ಆತ್ಮಜ್ಞಾನದಿಂದ ಮುಖ್ಯಸ್ಥರ - ಆಪ್ತನಾಗುತ್ತಾನೆ. ನಮಗೆ ಕಾಣದ, ಕಂಡರೂ ತಿಳಿಯದ, ಅನೇಕ ವಿಷಯಗಳಲ್ಲಿ ಅವನು ಅನುಭವಿ, ಸುಲಭವಾಗಿ ಸೀಟನ್ನು ಗಿಟ್ಟಿಸುತ್ತಾನೆ.

ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ನಮಗೆ ಬರೀ ಕತ್ತಲೆ ಕಂಡಾಗ, ಜ್ಞಾನಿಗೆ ಮಿಣಿ ಮಿಣಿ ದೀಪದ ಬೆಳಕು ಕಾಣುತ್ತಲೇ ಇರುತ್ತದೆ.

ಸಂತರು ಫಳಫಳಿಸುವ ಕೈಗಡಿಯಾರವನ್ನು ನೋಡಿಕೊಂಡರು. "ಮಹಾಜನರು ಕ್ಷಮಿಸಬೇಕು, ಪ್ಲೇನ್‌ಗೆ ಹೊತ್ತಾಯಿತು" ಎನ್ನುತ್ತಾ ಎದ್ದರು. ನಾನೂ ಭೂಮಿಗೆ ಇಳಿದು ಬಂದೆ.

ಗೀತೆಯ ಎಲ್ಲಾ ಶ್ಲೋಕಗಳಿಗೂ ಈತನ ವ್ಯಾಖ್ಯಾನವನ್ನು ಕೇಳಲೇ ಬೇಕು. ಕೇಳಿ ಕಾರ್ಯಗತ ಮಾಡಲು ಪ್ರಯತ್ನಿಸಿದರೆ, ದೊಡ್ಡ ಜ್ಞಾನಿಯಾಗಿ ಮನೆ ಕಟ್ಟದಿದ್ದರೂ, ಮರಿಜ್ಞಾನಿಯಾಗಿ. ಬಾಡಿಗೆ ಮನೆಯಾದರೂ ಗಿಟ್ಟಿಸುವ ತಾಖತ್ತನ್ನು ಪಡೆಯಬಹುದೇನೊ, ದಿವ್ಯಜ್ಞಾನದಿಂದ !



ಕವಿಯ ಕಾರ್ಯಾಗಾರ

—ರಾಜೀವ್

ಬರೆಯುವನು ಕವಿ ಬರೆಯುವನು
ಬಿಳಿ ಹಾಳೆಯ ಕಪ್ಪಾಗಿರಿಸುವನು
ಹಿರಿ ಕವಿಗಳು ಬರೆದುದ ಓದುವನು
ಓದುತ ಟಿಪ್ಪಣಿ ಮಾಡುವನು
ಸರಸರ ಏನೋ ಬರೆಯುವನು
ಸರಿಯಾಗದೆ ಪರಪರ ಹರಿಯುವನು ಕವಿ ಬರೆಯುವನು

ಶೂನ್ಯವ ನೋಡುತ ಕೂಡುವನು
ಸ್ವಂತ ರಚಿಸಲು ತಲೆ ತಿಣುಕುವನು
ತಲೆ ಕೆರೆಯುವನು, ತಲೆ ಕೊಡಹುವನು
ಸ್ಫೂರ್ತಿಗೆ ಅದು ಇದು ಕುಡಿಯುವನು ಕವಿ ಬರೆಯುವನು

ಬೀದಿ ಬೀದಿಯ ತಿರುಗುವನು
ಕವನಕೆ ವಸ್ತುವ ಹುಡುಕುವನು
ಕಷ್ಟಕೆ, ಕ್ರೌರ್ಯಕೆ ಹೆದರುವನು
ಹೆದರುತ ನಿದ್ದೆಯ ಮಾಡುವನು ಕವಿ ಬರೆಯುವನು


ಕನಸಲಿ ಯುದ್ಧವ ಸಾರುವನು
ಪೆನ್ನಿನ ಕತ್ತಿಯ ಹಿರಿಯುವನು
ಗೆಲ್ಲುತ ಮಾಲೆಯ ಧರಿಸುವನು
ಆ ಭ್ರಮೆಯಲ್ಲೇ ಬೀಗುವನು ಕವಿ ಬರೆಯುವನು

ಬರೆದುದ ಅಂಚೆಗೆ ಹಾಕುವನು
'ವಿಷಾದ'ಕೆ ಉಜ್ವಲಗೊಳ್ಳುವನು
ಹಿರಿಕವಿಗಳ ಪಾಡೂ ಹೀಗಿತ್ತಾಗ
ಎನ್ನುತ ಮತ್ತೆ ಚಿಗುರುವನು ಕವಿ ಬರೆಯುವನು

ಸಂಗೀತಗಾರರೊಡನೆ ರೇಡಿಯೋ ಸಂದರ್ಶನ

—ಜಿ. ವಿ. ಗಣೇಶಯ್ಯ

ಆಕಾಶವಾಣಿ – ತಂಗಳೂರು. ಈಗ ರಾಜ್ಯ ಪ್ರಶಸ್ತಿ ವಿಜೇತ ಸಂಗೀತ ಅಧ್ವಾನ್ ... ಕ್ಷಮಿಸಬೇಕು .... ಸಂಗೀತ ವಿದ್ವಾನ್ ಕರ್ಣಾನಂದ ಭಾಗವತರೊಡನೆ ಸಂದರ್ಶನ. ಸಂದರ್ಶಿಸುವವರು ಕರ್ಣಹೀನಯ್ಯನವರು.



"ನಮಸ್ಕಾರ ಕರ್ಣಾನಂದ ಭಾಗವತರಿಗೆ"

"ನಮಸ್ಕಾರ"

"ರಾಜ್ಯ ಪ್ರಶಸ್ತಿ ವಿಜೇತರಾದ ತಮ್ಮನ್ನು ನಮ್ಮ ಆಕಾಶವಾಣಿ ಶ್ರೋತೃಗಳಿಗೆ ಪರಿಚಯ ಮಾಡಿಕೊಡಬೇಕಾದ್ದಿಲ್ಲ. ತಮ್ಮ ಸಂಗೀತ ಸುಧೆಯನ್ನು ಅವರು ಆಗಿಂದಾಗ ಆಕಾಶವಾಣಿಯ ಮೂಲಕ ಸವಿಯುತ್ತಿರುತ್ತಾರೆ. ಆದರೂ ರಾಜ್ಯ ಪ್ರಶಸ್ತಿ ಪಡೆದ ಈ ಸಂದರ್ಭದಲ್ಲಿ ತಮ್ಮನ್ನು ಅಭಿನಂದಿಸುತ್ತಾ ಕೆಲವು ಪ್ರಶ್ನೆಗಳನ್ನು ತಮಗೆ ಕೇಳ ಬಯಸುತ್ತೇನೆ"

"ಆಗಲಿ ಕೇಳಿ"

"ತಾವು ಎಷ್ಟು ಸಮಯದಿಂದ ಈ ಸಂಗೀತ ಸಾಗರದಲ್ಲಿ ಈಜುತ್ತಿದ್ದೀರಿ ?"

"ಆ ಮಹಾಸಾಗರಕ್ಕೆ ಹಾರಿದಾಗಿನಿಂದಲೂ....

"ಸಂಗೀತವು ಶಿಶು, ಪಶು – ಇತ್ಯಾದಿಗಳಿಗೂ ಸಹ ಪ್ರಿಯವೆಂದು ಕೇಳಿದ್ದೇನೆ. ಪ್ರಾಣಿಗಳಾಗಲೀ, ಪಕ್ಷಿಗಳಾಗಲೀ ತಮ್ಮ ಸಂಗೀತವನ್ನು ಕೇಳಿ ಆನಂದಿಸಿದ ಅನುಭವ ತಮಗೆಂದಾದರೂ ಉಂಟಾಗಿದೆಯೇ ?"

"ಹೌದು 'ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿಗಾನ ರಸಂ ಫಣೀ'–ಎಂಬ ಮಾತಿದೆ. ನಾನೊಮ್ಮೆ ನನ್ನ ಮನೆಯಲ್ಲಿ ತನ್ಮಯನಾಗಿ ಹಾಡುತ್ತಿದ್ದಾಗ ಹೊರಗಡೆ ಗದ್ದಲವಾಯಿತು. ಏನೆಂದು ನೋಡಿದರೆ ನಾಲ್ಕಾರು ಗಾರ್ಧಬಗಳು ನನ್ನ ಸ್ವರದೊಡನೆ ಸ್ವರ ಸೇರಿಸಿ ಆಲಾಪಿಸುತ್ತಿದ್ದುವು. ಕತ್ತೆಗಳಂತಹ ಕಡಿಮೆ ಬುದ್ಧಿಯ ಪ್ರಾಣಿಗಳಿಗೇ ಸಂಗೀತವೆಂದರೆ ಅಷ್ಟೊಂದು ಅಕ್ಕರೆ ಇರಬೇಕಾದರೆ ನನ್ನ ಸಂಗೀತವನ್ನು ದ್ವೇಷಿಸುವ ಕೆಲವು ಜನರ ಮಟ್ಟ ಅದೆಷ್ಟು ಕೆಳಗಿರಬೇಕೆಂದು ಊಹಿಸಿಕೊಳ್ಳಿರಿ"

"ಇದಕ್ಕೆ ಏನಾದರೂ ಕಾರಣವಿರಬೇಕಲ್ಲವೇ ?"

"ಇದೆ, ಇದೆ !. ನಾನು ಯಾವತ್ತೂ ಶಾಸ್ತ್ರ, ಶೃತಿ, ಲಯ – ಇತ್ಯಾದಿಗಳಿಗೆ ದಾಸನಾದವನಲ್ಲ. ಶೃತಿ– ಲಯಗಳನ್ನು ಬಿಟ್ಟು ನಾನು - ನನ್ನದೇ ದಾರಿಯಲ್ಲಿ – ಬಹುದೂರ ಸಾಗಿದವನು. ಸಂಗೀತಕ್ಕೆ ಶೃತಿ ಮಾತ ಲಯಃ ಪಿತಾ-ಎನ್ನುತ್ತಾರೆ. ಈ ಮಾತಾ ಪಿತರನ್ನು ಬಿಟ್ಟು ಮಕ್ಕಳು ಮುಂದೆ ಹೋಗುವುದು ಈ ಕಾಲದಲ್ಲಿ ವಿಶೇಷವೇನೂ ಅಲ್ಲ ನೋಡಿ. ಆ ದಾರಿಯಲ್ಲಿ ನಾನು ಸಾಗುತ್ತಿದ್ದರೆ ಹಲವರ ದೃಷ್ಟಿಯಲ್ಲಿ ಹೀನಾಯ (ನಗು).

"ಇನ್ನೊಂದು ಪ್ರಶ್ನೆ ಭಾಗವತರೇ. ಸಂಗೀತದಿಂದ ಮಳೆಗರೆಸಬಹುದೆಂದು ಅನ್ನುತ್ತಾರೆ. ಅಂತಹ ಪ್ರಯೋಗವನ್ನು ನೀವೆಂದಾದರೂ ಮಾಡಿದ್ದೀರಾ ?"

"ಓಹೋ, ಮಾಡಿದ್ದೇನೆ."

"ಶ್ರೋತೃಗಳಿಗಾಗಿ ಸ್ವಲ್ಪ ವಿವರಿಸುತ್ತೀರಾ ?"

"ನಾನೊಮ್ಮೆ ಸುಡು ಬೇಸಿಗೆಯಲ್ಲಿ ಅಲ್ಪ ಸ್ವಲ್ಪ ನೀರಿದ್ದ ಕೆರೆಯೊಂದರ ಬಳಿ ಅಮೃತ ವರ್ಷಿಣೀ ರಾಗವನ್ನು ಹಾಡತೊಡಗಿದೆ. ಗಂಟೆ ಗಟ್ಟಲೆ ಹಾಡುತ್ತಾ ಕೆರೆಯನ್ನು ಗಮನಿಸತೊಡಗಿದೆ. ನನಗೆ ಅತ್ಯಾಶ್ಚರ್ಯವಾಯಿತು. ಕಾರಣವೇನೆಂದರೆ ಮಳೆ ಬರುವ ಬದಲಿಗೆ ಕೆರೆಯಲ್ಲಿದ್ದ ನೀರು ಆವಿಯಾಗಿ ಮೇಲೇರುತ್ತಿತ್ತು ! ಇನ್ನೂ

ಒಂದರ್ಧ ಗಂಟೆ ಹಾಡಿದಾಗ ಕೆರೆಯ ನೀರು ಪೂರ್ತಿ ಖಾಲಿಯಾಯಿತು. !

"ಹಾಗಾದರೆ ತಾವು ಅಮೃತ ವರ್ಷಿಣೀ ರಾಗವನ್ನು ಹಿಂದುಮುಂದಾಗಿ ಅಂದರೆ ಉಲ್ಟಾ ಹಾಡಿರಬೇಕಲ್ಲವೇ ?

"(ನಗುವಿನೊಡನೆ) ಛೇ ಛೇ, ಹಾಗೇನಿಲ್ಲ, ಪೂರ್ತಿ ಹೇಳುತ್ತೇನೆ ಕೇಳಿ. ವೈಜ್ಞಾನಿಕ ಸತ್ಯ ಅಡಗಿದೆ. ಏನು ಗೊತ್ತೇ ? ಮಳೆ ಬರುವುದಕ್ಕೆ ಏನು ಬೇಕು ಹೇಳಿ ?"

''ಆಕಾಶದಲ್ಲಿ ಮೋಡ ಬೇಕು.''

''ಮೋಡ ಆಗಬೇಕಾದರೆ ಏನು ಬೇಕು ಹೇಳಿ''

''ಭೂಮಿಯ ಮೇಲಿರುವ ನೀರು ಆವಿಯಾಗಿ ಮೇಲೆ ಹೋಗಬೇಕು.''

''ಹೌದೇ, ಇಲ್ಲಿ ಆದದ್ದು ಅದೇ. ಕೆರೆಯ ನೀರು ನನ್ನ ಸಂಗೀತದ ಪ್ರಭಾವ ದಿಂದ ಆವಿಯಾಗಿ ಆಕಾಶವನ್ನು ಸೇರಿತು. ಅಲ್ಲಿ ಅದು ಮೋಡವಾಗಿರಲೇಬೇಕು. ಇನ್ನಷ್ಟು ಹಾಡಿದ್ದರೆ ಅದು ಮಳೆಯಾಗಿ ನೆಲ ಸೇರುತ್ತಿತ್ತು........''

''ಹಾಗಾದರೆ ನೀವು ಯಾಕೆ ಇನ್ನಷ್ಟು ಹಾಡಲಿಲ್ಲ ?''

''ಯಾಕೆಂದರೆ ಬಿಸಿಲು ತಡೆಯಲಾರದೆ ಬವಳಿ ಬರುವ ಹಾಗಾಯಿತು. ಜೊತೆಗೆ ನನ್ನ ಶರೀರದಲ್ಲಿದ್ದ ನೀರೂ ಸಹ ಬೆವರಿನ ರೂಪದಲ್ಲಿ ಹೊರ ಬಂದು ಆವಿಯಾಗಿ ಆಕಾಶವನ್ನು ಸೇರತೊಡಗಿತು ! ಹಾಗಾಗಿ ತಂಬೂರಿಯನ್ನು ತೆಗೆದು ಕೊಂಡು ಮನೆಯ ದಾರಿ ಹಿಡಿದೆ.

''ಇನ್ನೊಂದು ಪ್ರಶ್ನೆ ಭಾಗವತರೇ.... ''

''ಹೂಂ ಕೇಳಿ''

''ನೀವು ಯಾವುದಾದರೂ ಹೊಸ ರಾಗವನ್ನು ಸೃಷ್ಟಿಸಿದ್ದೀರಾ ?"

''ಓಹೋ, ಹಿಂದಿನ ತಿಂಗಳು ರೋಗಪೀಡಿತನಾಗಿ ಮಲಗಿದ್ದಾಗ ಎರಡು ಹೊಸ ರಾಗಗಳನ್ನು ಸೃಷ್ಟಿಸಿದ್ದೇನೆ. ''ಒಂದು ರಾಗ ಕರ್ಣ ಕುಠಾರ. ಎರಡನೆ ಯದು ಕರ್ಣ ಭೈರಿಗೆ.''

''ಕೊನೆಯದಾಗಿ ಒಂದು ಪ್ರಶ್ನೆ''

''ಏನದು ?''

''ಭಾಗವತರೇ ಚಿತ್ರಕಲೆಯಲ್ಲಿ, ಶಿಲ್ಪ ಕಲೆಯಲ್ಲಿ ನವ್ಯ ಪಂಥ ಪ್ರಾರಂಭವಾಗಿ ಬಹಳಕಾಲವಾಗಿದೆ. ಹಾಗೆಯೇ ಸಂಗೀತದಲ್ಲೇನಾದರೂ ಅಂತಹ ಪಂಥ ಹುಟ್ಟಿದೆಯೇ ?

"ಯಾಕಿಲ್ಲ ? ನಾನು ಹಾಡುವುದೇ ನವ್ಯ ಶೈಲಿಯಲ್ಲಿ. ಇದಕ್ಕೆ ಸಾಕ್ಷಿ ಬೇಕೇ? ನೋಡಿ ಈಗ ನವ್ಯ ಶಿಲ್ಪ, ನವ್ಯ ಚಿತ್ರಗಳನ್ನು ಹೇಗೆ ಸಾಮಾನ್ಯ ಜನರು ಅರ್ಥವಾಗದೆ ಅಸಹ್ಯವೆಂದು ಮೆಚ್ಚುವುದಿಲ್ಲವೋ ಹಾಗೆಯೇ ನನ್ನ ಕಛೇರಿಗಳಿಗೂ ಜನ ಬರುವುದಿಲ್ಲ. ಸಾಮಾನ್ಯರ ವಿಚಾರವೇಕೆ, ವಿದ್ಯಾವಂತರಾದವರಿಗೂ ನನ್ನ ಸಂಗೀತ ಅರ್ಥವಾಗುವುದಿಲ್ಲ, ನನ್ನ ಸಂಗೀತವನ್ನೆಲ್ಲಾ ಧ್ವನಿ ಮುದ್ರಿಸಿಟ್ಟಿದ್ದರೆ ನನ್ನ ನಂತರದ ಪೀಳಿಗೆಯಾದರೂ ಅರ್ಥಮಾಡಿಕೊಂಡು ಆನಂದಿಸೀತು ಎನ್ನಿಸುತ್ತದೆ."

"ಭಾಗವತರೇ, ತಾವು ಇಷ್ಟು ದೂರ ಬಂದು ಇದುವರೆಗೂ ಈ ಸಂದರ್ಶನದಲ್ಲಿ ಪಾಲ್ಗೊಂಡುದಕ್ಕೆ ಶ್ರೋತೃಗಳ ಪರವಾಗಿ ತಮ್ಮನ್ನು ವಂದಿಸುತ್ತೇನೆ. ನಮಸ್ಕಾರ"

"ನಮಸ್ಕಾರ"

ಇದುವರೆಗೆ ನೀವು ಆಕಾಶವಾಣಿ ತಂಗಳೂರು ನಿಲಯದಿಂದ ರಾಜ್ಯ ಪ್ರಶಸ್ತಿ ವಿಜೇತೆ ಸಂಗೀತ ವಿದ್ವಾನ್ ಕರ್ಣಾನಂದ ಭಾಗವತರೊಡನೆ ಸಂದರ್ಶನ ಕೇಳಿದಿರಿ. ನಡೆಸಿಕೊಟ್ಟವರು ಕರ್ಣಹೀನಯ್ಯನವರು. ಇನ್ನುಮುಂದೆ ಸ ಲ್ಪ ಹೊತ್ತು (ಶಂಕ)ವಾದ್ಯ ಸಂಗೀತ........



Name of Publication : APARANJI

Publisher : M. SHIVAKUMAR

Printer : V. R. NATH

Owner : M. SHIVAKUMAR

Published in : Impressions, No 404, Sampige Road
Malleswaram, Bangalore-560 003

Place of Publication : Bangalore

April, 1986
Bangalore

